CC-O. In Public Domain. Digitized by eGangotri

ಅಮರ ಚಿತ್ರ ಕಥೆ

ನಂ 348 ರೂ 4/-

ಸ್ವಾತಂತ್ರ್ಯದ ಮುನ್ನಡೆ -

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಹುಟ್ಟು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಮರ ಚಿತ್ರ ಕಥೆ

348

ಸಂಪಾದಕರು:
ಅನಂತ ಪೈ

ಸಹ-ಸಂಪಾದಕರು:
ಶಾಮಲಾ ಚಾಂದ್ರಕಾಂತ್
ಸುಬ್ಬರಾವ್
ಯಜ್ಞ ಶರ್ಮ

ಕಲಾಸಲಹಗಾರರು:
ರಾಮ್‌ವಾಯಿಲ್ಕರ್

ಸಾಹಿತ್ಯ:
ಸುಬ್ಬರಾವ್
ಜೋಳ ರಾವ್

ಕಲೆ:
ರಾಮ್‌ವಾಯಿಲ್ಕರ್

ತಯಾರಕರು:
ಗೋವಿಂದ ಕೊಟ್ಟಾನಿ

ಮುದ್ರಣ:
ದೀಪಕ್ ಜಿ. ಮಿರ್ ಚಾಂದಾನಿ
ಐಬಿಎಚ್ ಪ್ರಿಂಟರ್ಸ್
ಮರೋಲ್‌ನಾಕ
ಮಥುರಾದಾಸ್
ವಿಸಾನ್ ಜೀ ರಸ್ತೆ
ಅಂಧೇರಿ (ಈಸ್ಟ್)
ಮುಂಬಯಿ - 400059

ಪ್ರಕಟಣೆ:
ಜಿ. ಕೆ. ಅನಂತರಾಮ್
ಐಬಿಎಚ್ ಪ್ರಕಾಶನ
ಗಾಂಧಿನಗರ
ಬೆಂಗಳೂರು - 560009

ಅಮರ ಚಿತ್ರ ಕಥೆ
ಓದುವುದು
ಒಂದು ಹವ್ಯಾಸವಾಗಲಿ

ಸ್ವಾತಂತ್ರ್ಯ ಮುನ್ನಡೆ

ಭಾಕ್ರನಾಂಗಲ್‌ನಂಥ ಯೋಜನೆಗಳು 'ನವ ಭಾರತದ ದೇಗುಲ'ಗಳಾದರೆ, ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಕಥೆ ನವಭಾರತದ ಮಹಾಕಾವ್ಯ. ಇದು ಜಾತಿ, ಮತ, ಧರ್ಮ, ಭಾಷೆ ಹಾಗೂ ಬಡವ ಬಲ್ಲಿದರ ನಡುವಿನ ಭೇದ ಭಾವವನ್ನು ನಿರ್ಮೂಲಗೊಳಿಸಿದೆ.

ಮಹಾಕಾವ್ಯಗಳು ಅಮರ. "ಹಿಮಾಲಯ ಇರುವವರೆಗೂ" ಮಹಾಕಾವ್ಯಗಳನ್ನು ಓದುವ, ಹಾಡುವ, ನಿರೂಪಿಸುವ, ಉಲ್ಲೇಖಿಸುವ ಮತ್ತು ಚರ್ಚಿಸುವ ಪರಿಪಾಠ ನಡೆದೇ ಇರುತ್ತದೆ. ಆದರೆ ಒಂದು ದೌರ್ಭಾಗ್ಯ ಎಂದರೆ, ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಮಹಾಕಾವ್ಯವು ಕೇವಲ ನಮ್ಮ ಪಠ್ಯಪುಸ್ತಕಗಳ ಮತ್ತೊಂದು ಅಧ್ಯಾಯವಾಗಿ ಬೆಳೆದು ರೂಪುಗೊಳ್ಳುತ್ತಿರುವುದೇ ಆಗಿದೆ.

"ರಾಜರು ಬಂದರೂ ರಾಗಿ ಬೀಸೋದು ತಪ್ಪೋಲ್ಲ" ಎಂಬ ಆಗಿನ ಕಾಲದ ನಮ್ಮ ಜನಪ್ರಿಯ ನುಡಿಗಟ್ಟನ್ನು ಗಮನಿಸಿದರೆ, ಬ್ರಿಟಿಷರ ಆಗಮನಕ್ಕೆ ಮುಂಚೆ ರಾಜರು ಮತ್ತು ನವಾಬರುಗಳು ಹೇಗೆ ಕೇವಲ ತಮ್ಮ ಅಧಿಕಾರ ಸಾಧನೆಗಾಗಿಯೇ ರಾಜ್ಯಭಾರ ನಡೆಸಿ, ಜನಸಾಮಾನ್ಯರ ಉದಾಸೀನಕ್ಕೆ ಕಾರಣರಾಗಿದ್ದರೆಂಬುದು ತಿಳಿಯುತ್ತದೆ.

ರಾಜರು ಮತ್ತು ನವಾಬರು ಆಗಿಂದಾಗ್ಗೆ 'ಬೆನ್ನಮೇಲೆ ಪ್ರಹಾರ' ಮಾಡುತ್ತಿದ್ದರೂ ನಮ್ಮ ಶ್ರೀಸಾಮಾನ್ಯ ತಾಳಿಕೊಂಡಿದ್ದ. ಆದರೆ ಬ್ರಿಟಿಷರು ನೇರ 'ಹೊಟ್ಟೆಯ ಮೇಲೆಯೇ' ಬಲವಾಗಿ ಹೊಡೆಯತೊಡಗಿದಾಗ ಮಾತ್ರ ಆತ ಗಾಢ ನಿದ್ರೆಯಿಂದ ಎಚ್ಚೆತ್ತ. ಏನಾಗುತ್ತಿದೆ? ಹೀಗೇಕೆ? ಎಂಬುದನ್ನು ತಿಳಿಯಲಿಕ್ಕೇ ಆತನಿಗೆ ಸಾಕಷ್ಟು ಕಾಲ ಬೇಕಾಯಿತು. ಆದರೆ ತಿಳಿವು ಮೂಡಿದೊಡನೆ ಆವನು ತಿರುಗಿಬಿದ್ದ. ತನ್ನ ಉಳಿವಿಗಾಗಿ ಮತ್ತು ಮಕ್ಕಳು, ಮೊಮ್ಮಕ್ಕಳ ಭವ್ಯ ಭವಿತವ್ಯಕ್ಕಾಗಿ ಹೋರಾಡಿದ. ಆ ಹೋರಾಟ ನಮಗಾಗಿ, ನಿಜ! ನಮ್ಮ ತಾಯ್ತಂದೆಯರು, ತಾತ ಮುತ್ತಾತಂದಿರು ಮತ್ತು ಅವರ ತಾತ ಮುತ್ತಾತಂದಿರು ಬ್ರಿಟಿಷರ ಆಳ್ವಿಕೆಯಲ್ಲಿ ಏನೆಲ್ಲ ಪಾಡುಪಟ್ಟರು ಎಂಬುದನ್ನು ನಾವು ಅವಶ್ಯ ತಿಳಿಯಬೇಕು.

ಏತಕ್ಕಾಗಿ ಮತ್ತು ಹೇಗೆ ಅವರು ಹೋರಾಟ ಮಾಡಿದರೆಂಬುದು ನಮಗೆ ಮುಖ್ಯ. ಆದರ ತಿರುಳೇ ನಮಗೆ ಮಹಾಕಾವ್ಯ. ನವಭಾರತದ ಮಹಾಕಾವ್ಯ.

ಈ ಪುಸ್ತಕ ರಚನೆಗೆ ಆಕರ ಗ್ರಂಥಗಳು

1. ದಿ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ—ರೋಮೇಶ್‌ದತ್ 1901
2. ಎ ಹಿಸ್ಟಾರಿಕಲ್ ಅಟ್ಲಾಸ್ ಆಫ್ ಸೌತ್ ಏಷ್ಯಾ—ಸಂ. ಜೋಸೆಫ್ ಇಷ್ಡಾರ್ಟ್ಸ್ ಬರ್ಗ್ (ದಿ ಯೂನಿವರ್ಸಿಟಿ ಆಫ್ ಚಿಕಾಗೋ ಪ್ರೆಸ್) 1978
3. ಹಿಸ್ಟರಿ ಆಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್—8, 9 ಮತ್ತು 10ನೇ ಸಂಪುಟಗಳು, ಪ್ರ. ಸಂ. ಆರ್. ಸಿ. ಮುಜುಂದಾರ್, (ಭಾ. ವಿ. ಭವನ 1963, 1965, 1977)
4. ದಿ ಹಿಸ್ಟರಿ ಆಫ್ ದಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್—ಪಟ್ಟಾಭಿ ಸೀತಾರಾಮಯ್ಯ 1ನೇ ಸಂಪುಟ, 1946
5. ಹಿಸ್ಟರಿ ಆಫ್ ದಿ ಫ್ರೀಡಂ ಮೂವ್‌ಮೆಂಟ್ ಇನ್ ಇಂಡಿಯಾ—ತಾರಾಚೆಂದ್ 1967, 1 ಮತ್ತು 2ನೇ ಸಂಪುಟಗಳು (ಪಬ್ಲಿಕೇಶನ್ಸ್ ಡಿವಿಜನ್)
6. ಇಂಡಿಯಾ ಇನ್ ದಿ ವಿಕ್ಟೋರಿಯನ್ ಏಜ್—ರೋಮೇಶ್‌ದತ್ 1904
7. ಪಾರ್ಟ್ ಆಂಡ್ ಆನ್-ಬ್ರಿಟಿಷ್ ರೂಲ್ ಇಂಡಿಯಾ—ದಾದಾಬಾಯಿ ನವರೋಜಿ 1901

ನಮ್ಮ ಮುಂದಿನ ಪ್ರಕಟಣೆ:
ಮಹಾಭಾರತ - 11
ದ್ರೌಪದಿಯ ಪ್ರವೇಶ

January 15, 1986

Published by G.K. Ananthram for IBH Prakashana, Gandhinagar, Bangalore 560 009 and printed by Deepak G. Mirchandani at IBH Printers, Marol Naka Mathuradas Vissanji Road, Andheri (East), Bombay 400 059

Sri Vidyabharathi Book Centre, Sringeri

Editor : ANANT PAI

CC-0. In Public Domain. Digitized by eGangotri

ಸ್ವಾತಂತ್ರ್ಯದ ಮುನ್ನುಡಿ

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಹುಟ್ಟು

1690ನೇ ಇಸವಿ. ಸ್ಥಳ: ಮೊಘಲ್ ಚಕ್ರವರ್ತಿ ಔರಂಗಜೇಬನ ಆಸ್ಥಾನ.
ಮೈದಿ: ಈಸ್ಟ್ ಇಂಡಿಯಾ ಕಂಪೆನಿಯ ಸರ್ ಜಾನ್ ಚೈಲ್ಡ್.

ಅವನ ಅಪರಾಧಗಳು: ಬ್ರಿಟಿಷ್ ವರ್ತಕರಿಗೆ ನೀಡಲಾದ ಸವಲತ್ತುಗಳ ದುರುಪಯೋಗ, ಬಂದರುಗಳನ್ನು ವಶಪಡಿಸಿಕೊಳ್ಳುವ ಪ್ರಯತ್ನ, ಭಾರತದಲ್ಲಿ ಬ್ರಿಟಿಷ್ ಆಧಿಪತ್ಯ ಸ್ಥಾಪಿಸುವ ಹವಣಿಕೆ.

ಸರ್ ಜಾನ್ ಚೈಲ್ಡನು ದೇಶಬಿಟ್ಟು ಹೋಗುವಂತೆ ಔರಂಗಜೇಬನು ಆಜ್ಞಾಪಿಸಿದ. ಆದರೆ ಬ್ರಿಟಿಷ್ ವರ್ತಕರು ತಮ್ಮ ವಾಣಿಜ್ಯವನ್ನು ಮುಂದುವರಿಸಲು ಅನುಮತಿ ಕೊಟ್ಟ.

ಇದು ನಡೆದದ್ದು - ಇಡೀ ಪ್ರಪಂಚದಲ್ಲೇ ಪಿದ್ಧಪಡಿಸಿದ ವಸ್ತುಗಳನ್ನು ಉತ್ಪಾದಿಸುವುದರಲ್ಲಿ ಭಾರತ ಮುಂಚೂಣಿಯಲ್ಲಿದ್ದ ಕಾಲದಲ್ಲಿ. ನಮ್ಮ ಅಮೃತ್ಯಮ ಹತ್ತಿ ಮತ್ತು ರೇಷ್ಮೆ ವಸ್ತ್ರಗಳು ಪ್ರಪಂಚದ ಎಲ್ಲೆಡೆ ಭಾರೀ ಬೇಡಿಕೆ ಪಡೆದಿದ್ದು, ನಾವು ಬಿಳಿ ಮತ್ತು ಬಂಗಾರವನ್ನು ಅಧಿಕ ಪ್ರಮಾಣದಲ್ಲಿ ಸಂಗ್ರಹಿಸಲು ಸಶವಾದವು. ನಮ್ಮ ಬಳಿ ಒಳನಾಡು ಮತ್ತು ಹೊರದೇಶಗಳಿಗೆ ಸಾಮಾನು ಸರಂಜಾಮುಗಳನ್ನು ಯ್ಯುವ ಸುಮಾರು ಒಂದು ಲಕ್ಷ ನಾಡದೋಣಿಗಳು ಹಾಗೂ ಹಡಗುಗಳಿದ್ದವು. ಅವುಗಳಲ್ಲಿ ಕೆಲವಂತೂ ಯೂರೋಪಿಯನ್ ಹಡಗುಗಳಿಗಿಂತ ಉತ್ಕೃಷ್ಟವಾಗಿದ್ದವು.

Sri Vidyabharathi Book Centre, Shringeri

CC-0. In Public Domain. Digitized by eGangotri

18ನೇ ಶತಮಾನದ ಉತ್ತರಾರ್ಧದಲ್ಲಿ ಮೊಘಲ್ ಆಡಳಿತದ ಪತನದೊಡನೆ ಪರ್ಷಿಯನ್ ಮತ್ತು ಆಫ್ಘನ್ ಆಕ್ರಮಣಗಳಿಂದ ದುರ್ಬಲಗೊಂಡಿದ್ದ ನಮ್ಮ ರಾಷ್ಟ್ರ ಅಂತರಿಕ ಒಳಜಗಳಿಂದ ಸುಲಭವಾಗಿತ್ತು. ಪರಸ್ಪರ ಕಾದಾಡುತ್ತಿದ್ದ ನಮ್ಮ ರಾಜರು ತಮ್ಮ ವೈಯಕ್ತಿಕ ದ್ವೇಷವನ್ನು ತೀರಿಸಿಕೊಳ್ಳಲು ಬ್ರಿಟಿಷ್ ಸೈನ್ಯದ ನೆರವು ಯಾಚಿಸಿದರು. ಬ್ರಿಟಿಷರು ತಮ್ಮ ಆಧಿಪತ್ಯ ಸ್ಥಾಪನೆಗೆ ಈ ಅವಕಾಶವನ್ನು ಉಪಯೋಗಿಸಿಕೊಂಡರು. ಇದನ್ನು ಅವರು ಎಷ್ಟು ಜಾಣ್ಮೆಯಿಂದ, ವಿಧಾನವಾಗಿ ಮತ್ತು ಸುತಂತ್ರದಿಂದ ನಿರ್ವಹಿಸಿದರೆಂದರೆ, 19ನೇ ಶತಮಾನದ ಆದಿಭಾಗದಲ್ಲೇ ಅವರು ನಮ್ಮ ದೇಶದ ಪ್ರಬಲ ಶಕ್ತಿ ಎನಿಸಿಕೊಂಡರು.

ಇದಕ್ಕೆ ಮುನ್ನ ಅನೇಕರು ನಮ್ಮನ್ನು ಆಳಿದರು. ಬಾಬರ್ ಮತ್ತು ಇತರ ಮೊಘಲರು ಭಾರತದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದರಾದರೂ ಅವರು ಭಾರತವನ್ನು ತಮ್ಮ ನೆಲೆಯಾಗಿಸಿಕೊಂಡು, ಈ ರಾಷ್ಟ್ರದ ಮಣ್ಣಿನ ಮಕ್ಕಳೇ ಆಗಿಬಿಟ್ಟರು. ಅವರ ಆಡಳಿತದಲ್ಲಿ ರಾಷ್ಟ್ರದ ಸಂಪತ್ತು ನಮ್ಮೂರಿನಲ್ಲೇ ಉಳಿಯುತ್ತು.



ಬ್ರಿಟಿಷರು ಇದಕ್ಕಿಂತ ಭಿನ್ನವಾಗಿದ್ದರು. ಅವರು ಬಡವ-ಬಲ್ಲಿದ ಎನ್ನದೆ ಭೂಕಂದಾಯಗಳಿಂದ ಮತ್ತು ಅನ್ಯಾಯವಾದ ವ್ಯಾಪಾರ ವಿಧಾನಗಳಿಂದ ನಮ್ಮ ದೇಶದ ಜನರನ್ನು ಸುಲಿಗೆ ಮಾಡಿದರು.



ಹೀಗೆ ಅವರು ಜಮಾಯಿಸಿದ್ದ ಸಂಪತ್ತು ನಮ್ಮ ಪಾಲಿಗೆ ಎಂದೆಂದೂ ಇಲ್ಲವಾಯಿತು.

Sri Vidyaranya Book Centre, Shringeri

CC-0. In Public Domain. Digitized by eGangotri

ಬ್ರಿಟಿಷರ ಮೊದಲ ಕಾಕದೃಷ್ಟಿ ಬಿದ್ದದು ವಿದೇಶಗಳೊಂದಿಗೆ ವ್ಯಾಪಾರ ವಹಿವಾಟು ನಡೆಸುತ್ತಿದ್ದ ಭಾರತೀಯ ವರ್ತಕರ ಮೇಲೆ. ಈಸ್ಟ್ ಇಂಡಿಯಾ ಕಂಪನಿ ಅವರಿಂದ ವ್ಯಾಪಾರವನ್ನು ಬಲಾತ್ಕಾರವಾಗಿ ಕಿತ್ತುಕೊಂಡಿತು. ಬಂಗಾಳದ ಕುಶಲಕರ್ಮಿಗಳು, ಬೇಸಾಯಗಾರರು ಮತ್ತು ವಣಿಕರನ್ನು ಕಂಪನಿಯವರು ಕಾಡಿಸಿ ಪೀಡಿಸತೊಡಗಿದರು.

Sri Vidyabharathi Book Centre, Sringeri

CC-0. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri









Sri Vidyabharathi Book Centre, Sringeri

CC-O. In Public Domain. Digitized by eGangotri





Sri Vidyabharathi Book Centre, Sringeri

CC-0. In Public Domain. Digitized by eGangotri

ಅದೇನೇ ಇದ್ದರೂ ಯಂತ್ರಗಳಿಂದ ತಯಾರಾದ ತನ್ನ ವಸ್ತುಗಳನ್ನು ಭಾರತದಲ್ಲಿ ಮಾರಾಟ ಮಾಡಲೇ ಬೇಕೆಂದು ಬ್ರಿಟನ್ ನಿರ್ಧಾರ ಮಾಡಿತ್ತು.

ಅಲ್ಲಿಯ ವಸ್ತುಗಳಿಗೆ ನಮ್ಮ ದೇಶದಲ್ಲಿ ಸುಂಕ ತೆರಬೇಕಾಗಿರಲಿಲ್ಲ. ಆದ್ದರಿಂದ ಅದು ಅವರಿಗೆ ಸುಲಭವೂ ಆಗಿತ್ತು.

ಅಲ್ಲದೆ ಅವರ ಇಲ್ಲಿನ ಸರಕಾರ ನಮ್ಮ ಬಟ್ಟೆಗಳ ಮೇಲಿನ ತೆರಿಗೆಯನ್ನು ಗಗನಕ್ಕೇರಿಸಿ ಅವರ ಬಟ್ಟೆಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿತು.

ನಾನು ಉತ್ತಮವಾದ ಬಟ್ಟೆಯನ್ನೇ ಹೊಳ್ಳ ಬಯಸುತ್ತೇನೆ. ಅದು ಬಹಳ ಅಗ್ಗ.

ಕ್ರಮೇಣ ನಮ್ಮ ಹತ್ತಿ ಬಟ್ಟೆಗಳ ಬೇಡಿಕೆ ಇಳಿಮುಖವಾಯಿತು.

ಫರಂಗಿಯವರು ಬಟ್ಟೆ ತಯಾರಿಸಲು ನಮ್ಮನ್ನೀಗ ಕಾಡುತ್ತಿಲ್ಲ.

ನಮ್ಮ ಜನರೂ ಹೂಡಾ ಅವರ ಅವಶ್ಯಕತೆಗಳಿಗಾಗಿ ನಮ್ಮ ಬಳಿ ಬರುತ್ತಿಲ್ಲ.

ಬ್ರಿಟನ್ನಿನ ನೇಕಾರರು ಮತ್ತು ಬಟ್ಟೆ ವಿರಣಿಗಳ ಮಾಲೀಕರು ಉಚ್ಚಾಟ್ಯ ಸ್ಥಿತಿಗೆ ಏರಿದಂತೆಲ್ಲಾ, ನಮ್ಮ ಕುಶಲಕರ್ಮಿಗಳ ಶೋಷಣೆ ಸಂಚಕಾರ ಒದಗಿತು.

ತಾತಾ! ನಿಮ್ಮ ಮಗ್ಗಗಳು! ಏನಾದರೂ ಮಾಡುವಿರೋ?

ಅವು ಸುಟ್ಟು ಬೂದಿಯಾಗಲಿ. ನಾನೇ ಅವುಗಳಿಗೆ ಬೆಂಕಿ ಹಚ್ಚಿದೆ. ಅವುಗಳಿಂದ ಈಗೇನೂ ಲಾಭವಿಲ್ಲ.

ಅನೇಕ ನೇಕಾರರು ಕೃಷಿ ಕಾರ್ಮಿಕರಾಗಿ ಜೀವನ ಮಾಡತೊಡಗಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಷಿ ಕ್ಷೇತ್ರದಲ್ಲೂ ನಮ್ಮ ಜನತೆ ಮುಂದುವರಿಯಲು ಆಗಲಿಲ್ಲ. ಹೆಸರಿಗೆ ಮಾತ್ರ ಚಕ್ರವರ್ತಿಯಾಗಿದ್ದ ಮೊಘಲನಿಂದ ಕಂಪನಿಯವರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ಭೂಕಂದಾಯ ಸಂಗ್ರಹಿಸುವ ಅಧಿಕಾರ ಪಡೆದುಕೊಂಡರು.









ನಿಮ್ಮ ಹಳ್ಳಿಯಿಂದ ನಮಗೆ ಬಾಕಿ ಇನ್ನೂ ಬಂದಿಲ್ಲ.

ಕೃಷಿಕರಿಂದ ಕಂದಾಯ ವಸೂಲು ಮಾಡಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದೇನೆ ಸಾಹೇಬರೇ.

ಈ ಬಾರಿಯ ಸುಗ್ಗಿ ಚೆನ್ನಾಗಿರಲಿಲ್ಲ. ನಮ್ಮ ರೈತರ ಬವಣೆಗಳು ನಿಜಕ್ಕೂ ಹೆಚ್ಚಿವೆ.

ಹುಚ್ಚುಮಾತು!

ಕಂದಾಯ ಕೊಡಲು ಹೇಳು! ಕೊಡದಿದ್ದರೆ ಅವರ ಜಮೀನನ್ನು ಕಿತ್ತುಕೋ.

ಅದು ಮಾತ್ರ ಬೇಡಿ ಸಾಹೇಬರೇ!

ನಮ್ಮ ದೇಶದಲ್ಲಿ ರೈತನಿಗೆ ಗಾಳಿ ಮತ್ತು ನೀರಿನ ಮೇಲಿರುವಷ್ಟೇ ಹಕ್ಕು ಭೂಮಿಯ ಮೇಲೆಯೂ ಇದೆ.

ಅವನು ಉಳುಮೆ ಮಾಡಿದ ಭೂಮಿಯನ್ನು ಕಿತ್ತುಕೊಳ್ಳಲು ಯಾರಿಗೂ, ನವಾಬನಿಗೂ ಅಧಿಕಾರವಿಲ್ಲ.

ಕಂದಾಯ ಸಂಗ್ರಹಣೆಯೇ ನನ್ನ ಏಕ ಮಾತ್ರ ಹೊಣೆಯಾಗಿಲ್ಲ. ನಾನು ನ್ಯಾಯವನ್ನೂ ಕೊಡಬೇಕು. ನನ್ನವರನ್ನು ಸಂರಕ್ಷಿಸಲು....

ಹಾಗಿದ್ದರೆ ಕಂದಾಯ ವಸೂಲಿಯನ್ನು ನಿನ್ನ ಏಕ ಮಾತ್ರ ಹೊಣೆಯಾಗಿರುವಂತೆ ನಾನು ಸೂಚಿಸುತ್ತೇನೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ಕಂಪನಿಯು ಅನ್ಯತ್ರದಲ್ಲಿದ್ದ ತಮ್ಮ ಹೂಡಿಕೆಯ ಮೇಲೆ ಹೊಸ ಜಮೀನ್ದಾರರನ್ನು ನೇಮಕ ಮಾಡಿತು. ಅವರಿಷ್ಟು ಹಣ ತೆರಬಲ್ಲರೆಂಬುದರ ಮೇಲೆ ಅವರನ್ನು ಆಯ್ಕೆ ಮಾಡುತ್ತಿತ್ತು. ಮತ್ತು ಅವರ ಅಧಿಕಾರಾವಧಿ ಒಂದರಿಂದ ಐದು ವರ್ಷಗಳವರೆಗೆ ಬದಲಾಗುತ್ತಿತ್ತು.

ಕಂಪನಿ ತ್ವರಿತವಾಗಿ ಕಂದಾಯವನ್ನು ನಿರೀಕ್ಷಿಸುತ್ತದೆ. ಅದನ್ನು ನೀಡದವರ ಮೇಲೆ ಕ್ರಮ ಜೈಗೊಳ್ಳಲಾಗುವುದು.

ಹೊಸ ಜಮೀನ್ದಾರರಲ್ಲಿ ಕೆಲವರು ಗುತ್ತಿಗೆದಾರರಾಗಿದ್ದರು. ಇನ್ನು ಕೆಲವರು ಪಟ್ಟಣ ಪ್ರದೇಶಗಳಿಂದ ಬಂದವರು ಜಮೀನ್ದಾರರಾದರು. ಅವರು ಹಳ್ಳಿಗಳಲ್ಲಿ ಭೇಟಿ ಕೊಡಲಿಲ್ಲ. ಅವರು ಕೃತಕದಿಂದ ಹಣ ವಸೂಲಿ ಮಾಡಲು ತಮ್ಮ ಜನರನ್ನು ಕಳಿಸಿದರು.

ಅದು ನನಗೆ ಸಂಬಂಧಿಸಿದ್ದಲ್ಲ. ನಾನಿಲ್ಲಿ ಬಂದಿರುವುದು ಹಣ ವಸೂಲಿಗಾಗಿ.

ಹುಜೂರ್, ನಾವು ಬೆಳೆದದ್ದೆಲ್ಲ ವನ್ನೂ ಬಯ್ಯಬೇಡಿ. ನಾವೇನು ಊಟ ಮಾಡಬೇಕು?

1770ರಲ್ಲಿ ಬಂಗಾಳದಲ್ಲಿ ಭಯಂಕರ ಕ್ಷಾಮ ತಲೆದೋರಿತು. ಅಲ್ಲಿನ ಒಟ್ಟು ಜನಸಂಖ್ಯೆಯ ಮೂರನೇ ಒಂದು ಭಾಗದಷ್ಟು ಜನ ಸತ್ತರು.

ಆದರೂ ಕಂಪೆನಿ ಕಿಂಚಿತ್ತೂ ಕನಿಕರ ತೋರಿಸದೆ ತನ್ನ ತೆರಿಗೆ ವಸೂಲು ಮಾಡುತ್ತಿತ್ತು.

ಸರ್, ಈ ವರ್ಷವೂ ಸರಕಾರದ ಆದಾಯದ ಗುರಿ ಮುಟ್ಟಿದ್ದೇವೆ.

ಬಳ್ಳಿಯ ಹೊಲಸು ಮುಂದುವರೆಸಿ.

ಮುಂದೆ ಬಿತ್ತಲೆಂದು ಕೊಂಡಿಡಿಸಿದ್ದ ಕಾಳನ್ನೂ ಸ್ವಾಧೀನಪಡಿಸಿಕೊಳ್ಳಲಾಯಿತು. ಇದರಿಂದ ಆಹಾರ ಧಾನ್ಯದ ಬೆಲೆಗಳು ಮತ್ತಷ್ಟು ಹೆಚ್ಚಿದವು.

Sri Vidyabharathi Book Centre, Sringeri

CC-0. In Public Domain. Digitized by eGangotri

ನಮ್ಮ ದೇಶದ ಜನತೆಯ ಕೆಲವರಿಂದ ಕೆಲವರ ಬಗೆ ಹೆದರಿಕೆಯಿಂದ ಬಂಗಾಳದ ದಿನಾಜ್‌ಪುರದಲ್ಲಿ-

ಟಿ-ಟಿಹೆ!

ನಮ್ಮ ಮೇಲೆ ದಯತೋರಿ ಹುಜೂರ್.

ತೆರ ಕಟ್ಟದೇ ಇದ್ದುದಕ್ಕೋ?

ಅವಳನ್ನು ಚಾದಟಿಯಿಂದ ಹೊಡೆಯಿರಿ! ಅವರನ್ನು ಮನೆಯಿಂದ ಹೊರಹಾಕಿ! ಅವರ ಆಸ್ತಿಯನ್ನು ಹರಾಜು ಹಾಕಿ!

ಕಂಪನಿ ನೇಮಿಸಿದ ಶ್ರೀಮಿ ದೇವಿಸಿಂಗ್ ಯಾರನ್ನೂ ಬಿಡಲಿಲ್ಲ.

ನಮ್ಮ ಗ್ರಾಮೀಣ ಜನತೆ ಅಸಹಾಯಕರಾಗಿದ್ದರು.

ಫರಂಗಿಯವರು ಧರ್ಮವನ್ನು ನಂಬುವುದಿಲ್ಲ. ಅವರು ತಮ್ಮ ಕೆಲಸಗಳಿಗೆ ದೇವಿಸಿಂಗ್ ನಂಥ ಪಾಪಿಗಳನ್ನು ನೇಮಿಸಿಕೊಂಡಿದ್ದಾರೆ.

ನಾವು ಯಾವುದಾದರೂ ಬೇರೆ ಸ್ಥಳಕ್ಕೆ ವಲಸೆ ಹೋಗೋಣ.

ಹೌದು. ನಮ್ಮದಿಯಿಂದ ಬಾಳಬಲ್ಲ ಜಾಗಕ್ಕೆ ನಾವು ಹೋಗೋಣ.

ಸ್ತ್ರೀಪುರುಷರು, ಮಕ್ಕಳು ಮರಿ ಸಮೇತ ದಿನಾಜ್‌ಪುರವನ್ನು ತೊರೆದು ಹೊರಬರತೊಡಗಿದರು.

Sri Vidyabharathi Book Gallery

CC-O. In Public Domain. Digitized by eGangotri





Sri Vidyaranya Book Centre, Shimoga

CC-O. In Public Domain. Digitized by eGangotri

ಗೌವರ್ನರ್ ಜನರಲ್ ಕಾರ್ನ್‌ವಾಲೀಸ್ ಮಧ್ಯ ಪ್ರವೇಶಿಸಿದ ಪರಿಣಾಮ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದ. ಈ ಪದ್ಧತಿಯನ್ವಯ ಭೂಕಂದಾಯವನ್ನು ಅಧಿಕೃತವಾಗಿ ವಸೂಲು ಮಾಡುವ ಅಧಿಕಾರ ಪಡೆದಿದ್ದ ಜಮೀನ್ದಾರರೇ ಈಗ ಭೂಮಾಲೀಕರೂ ಆದರು.

ನೀವು ನಮಗೆ ನಿರ್ದಿಷ್ಟ ಕಂದಾಯವನ್ನು ಕೊಡಬೇಕು. ನಮಗೆ ಪಾವತಿ ಮಾಡಿ ಉಳಿದ ಮೊತ್ತ ಅದೆಷ್ಟೇ ಇರಲಿ ಅದು ನಿಮಗೆ.

ರೈತರಿಂದ ನಾವೆಷ್ಟು ಕಂದಾಯ ವಸೂಲು ಮಾಡಬೇಕು?

ಅದು ನಿಮ್ಮ ತೀರ್ಮಾನಕ್ಕೇ ಬಿಟ್ಟದ್ದು.

ಆದರೆ ನಮಗೆ ಬರಬೇಕಾದ ಬಾಕಿ ಸಕಾಲದಲ್ಲಿ ಸಂದಾಯವಾಗಲೇ ಬೇಕು.

ಇಲ್ಲವಾದರೆ ನಿಮ್ಮ ಜೊಲ-ದದ್ದಾಗಳನ್ನೆಲ್ಲ ಮುಟ್ಟುಗೋಲು ಹಾಕಿಕೊಂಡು, ಅವನ್ನು ಬಹಿರಂಗ-ವಾಗಿ ಹರಾಜು ಮಾಡಲಾಗು-ವುದು.

ಎಷ್ಟೇ ಜಮೀನ್ದಾರ-ರಿಗೆ ನಿಶ್ಚಿತ ಗಡುವಿ-ನೊಳಗೆ ಕಂದಾಯ ಕೊಡಲಾಗಲಿಲ್ಲ.

ನಾವು ನಿಮಗೆ ಸಕಾಲ-ದಲ್ಲಿ ಪಾವತಿ ಮಾಡದಿದ್ದರೆ ನೀವು ನಮ್ಮ ಆಸ್ತಿಪಾಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳು-ವಿರಿ. ಆದರೆ ರೈತರ ಮೇಲೆ ನಮಗಿಂಥ ಅಧಿಕಾರವಿಲ್ಲ.

ಹುಂ.... ಮ್... ಹಾಗೋ?

Sri Mahabharatha Book Centre, Srirangam

CC-0. In Public Domain. Digitized by eGangotri

ಹೊಸ ಕಾನೂನುಗಳಿಂದು ಜಾರಿಗೆ ಬಂದವು. ತೀರಿಸದ ರೈತರಿಂದ ಕೃಷಿ ಉತ್ಪನ್ನಗಳನ್ನೂ, ಉಪಕರಣಗಳನ್ನೂ ಜಮೀನ್ದಾರರು ವಶಪಡಿಸಿಕೊಳ್ಳುವ ಅಧಿಕಾರ ನೀಡಿತ್ತು. ತಪ್ಪಿತಸ್ಥರನ್ನು ಶಿಕ್ಷಿಸಲೂ ಬಹುದಿತ್ತು.

ಬೋಡಿ! ನನ್ನ ಹೋರಿಗಳನ್ನು ಹೊಡೆದುಕೊಂಡು ಹೋಗಬೇಡಿ!

ಭಾನಯ್ಯನನ್ನು ಹೊಡೆದಿದ್ದರೆ ನೀನು ನಿನ್ನ ಮನೆಯನ್ನೂ ಸುಳಿದುಕೊಳ್ಳುತ್ತೀಯ.

ಆಗ ಲೇವಾದೇವಿಗಾರರ ಹೊಸ ಸಂತತಿ ಹಳ್ಳಿಗಳಲ್ಲಿ ಅಂಕುರವಾಯಿತು.

ಏನು ಸಮಾಚಾರ?

ಇಂದೇ ನನ್ನ ಬಾಕಿ ತೀರಿಸದೆ ಇದ್ದರೆ ನನ್ನ ಸರ್ವನಾಶವಾಗುತ್ತದೆ.

ಚಿಂತಿಸಬೇಡ. ನಾನು ನಿನಗೆ ಹಣ ಸಾಲ ಕೊಡುವೆ.

ನೀನು ಮಾಡಬೇಕಾದುದು ಇಷ್ಟೇ....

ಇಗೋ! ಇದರಲ್ಲಿ ನಿನ್ನ ಹೆಬ್ಬೆಟ್ಟಿನ ಗುರುತನ್ನು ಒತ್ತಿದರು.

ಹಣಕಾಸ್ಸಿಗೆ ಕಂಗಾಲಾಗಿದ್ದ ಬಡ ರೈತರು ಏನೊಂದನ್ನೂ ಪ್ರಶ್ನಿಸದೆ ಪತ್ರಗಳಲ್ಲಿ ಹೆಬ್ಬೆಟ್ಟಿನ ಗುರುತನ್ನು ಒತ್ತಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

* ಬರಹರೂಪದಲ್ಲಿದ್ದ ನಮ್ಮ ದೇಶದ ಪುರಾತನ ಕಾನೂನು. ಅಕ್ಷರಶಃ ಅರ್ಥ-ಬೆಲೆಯ ದುಪ್ಪಟ್ಟು.

CC-0. Mumukshu Bhawan Varanasi Collection. Digitized by eGangotri

ದಮ್ಖಿನಿನ ಕೃಷಿಕರ ಸ್ಥಿತಿ ಇದಕ್ಕಿಂತ ಉತ್ತಮವಾಗೇನೂ ಇರಲಿಲ್ಲ. ಸರಕಾರದ ಕ್ರೂರ ನೀತಿಯಿಂದಾಗಿ ಅದರೂ ಶೋಷಾದೇವಿಗಳಾರರನ್ನು ಆಶ್ರಯಿಸಬೇಕಾಯಿತು. ಅವರಲ್ಲಿ ಬಹಳಷ್ಟು ಜನ ತಮ್ಮ ಹೊಲಗಳಲ್ಲೇ ಕೃಷಿ ಕೂಲಿಗಾರರಾಗಿ ದುಡಿಯಬೇಕಾಯಿತು.

ಗಳನ್ನೂ, ದುರ್ಬಿನಗಳನ್ನೂ ಕಂಡವನು. ಹಾಗೇ ಒಳ್ಳೆಯ ಮತ್ತು ದುಷ್ಟ ತಿಡಳಿತಗಾರರನ್ನೂ ಕಂಡಿದ್ದೇನೆ. ಆದರೆ ಯಾರೂ ನಮ್ಮ ಜಮೀನು ಕಿತ್ತುಕೊಂಡಿರಲಿಲ್ಲ. ಈಗ ನಾವು ನಮ್ಮ ಭೂಮಿಯಲ್ಲೇ ಗುಲಾಮರಾಗಿದ್ದೇವೆ.

ಸಾಮಾನ್ಯ ಪರಿಸ್ಥಿತಿಗಳಲ್ಲಿ ಕೃಷಿಕರ ಜೀವನವೆಷ್ಟು ಬಹಳ ಕುಸಿದಿತ್ತು. ದುರ್ಭಿಕ್ಷ ಕಾಲದಲ್ಲಿ ಲಕ್ಷಗಟ್ಟಲೆ ಜನರು ಸತ್ತರು. ಬದುಕುಳಿದವರು ಪೌಷ್ಟಿಕಾಂಶಗಳಿಲ್ಲದೆ ಸತ್ವಹೀನರಾಗಿ ರೋಗಪೀಡಿತರಾದರು.

ನಾನು ಚಿಕ್ಕವನಾಗಿದ್ದಾಗ ನನ್ನ ತಾತ ಹೇಳುತ್ತಿದ್ದರು: ರಾಜ ತೆಗೆದುಕೊಳ್ಳುವ ತೆರಿಗೆ ಸೂರ್ಯ ನೀರನ್ನು ಹೀರಿ....

...ಮತ್ತೆ ಮಳೆ ಸುರಿಸಿ ಭೂಮಿಯನ್ನು ಫಲವತ್ತು ಮಾಡುವಂತೆ ಇರಬೇಕು.

ಆದರೆ ಫರಂಗೀಯರು ಸಂಗ್ರಹಿಸುವ ತೆರಿಗೆಯಿಂದಾಗಿ ನಮ್ಮ ನಾಡಿಗೆ ಕ್ಷಾಮವೇ ಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸೋರಿ ಹೋದ ಸಂಪತ್ತು



ಒಂದು ಕಾಲದಲ್ಲಿ ತನ್ನ ಶ್ರೀಮಂತಿಕೆ ಹಾಗೂ ಕೌಶಲ್ಯಕ್ಕಾಗಿ ಹೆಸರಾಗಿದ್ದ ನಮ್ಮ ದೇಶ ಇಂದು ಅತಿ ಬಡ ದೇಶಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟಿರುವುದು ಏಕೆ ?

ಪ್ರಮುಖವಾಗಿ ಈ ದೇಶದಿಂದ ನಾನಾ ತೆರನಾಗಿ, ನಾನಾ ನೆಪಗಳಿಂದ ಸಂಪತ್ತು ಸೋರಿಹೋದುದೇ ಇದಕ್ಕೆ ಕಾರಣ.

ಹೆಚ್ಚು ಕಡಿಮೆ ಸರಕಾರದ ಎಲ್ಲಾ ಉನ್ನತ ಹುದ್ದೆಗಳನ್ನು ಬ್ರಿಟಿಷರೇ ಹೊಂದಿದ್ದರು. ಅವರಿಗೆ ಕೈತುಂಬಾ ಸಂಬಳ ಮತ್ತು ನಿವೃತ್ತಿ ನಂತರದ ಸೌಲಭ್ಯ ಲಭಿಸುತ್ತಿದ್ದವು. ಅವರ ವೇತನಕ್ಕೆ ಹಾಗೂ ಸರಕಾರದ ಎಲ್ಲಾ ಖರ್ಚುವೆಚ್ಚಗಳಿಗೆ ಬೇಕಾದ ಹಣ ನಮ್ಮ ಜನರಿಂದ ಸುಲಿಯಲಾದ ಹೇರಳ ಕಂದಾಯಗಳಿಂದ ಸಂಗ್ರಹವಾಗುತ್ತಿತ್ತು. ನಮ್ಮ ದೇಶದ ಭಾಗಗಳ ಮೇಲೆ ಮತ್ತು ಬ್ರಿಟನ್ನಿನ ಸುತ್ತಮುತ್ತಲ ಪ್ರದೇಶಗಳ ಮೇಲೆ ಅವರು ಮಾಡುವ ಯುದ್ಧಕ್ಕೆ ಹಾಗೂ ಅವರ ಸಾಮ್ರಾಜ್ಯ ವಿಸ್ತರಣೆಗೆ ನಾವೇ ಹಣ ತೆರಬೇಕಿತ್ತು. ಇಷ್ಟೇ ಅಲ್ಲದೆ, ನಾವು ಅವರಿಗೆ ವಾರ್ಷಿಕ ಕಂದಾಯವನ್ನೂ ನೀಡಬೇಕಿತ್ತು. 19ನೇ ಶತಮಾನದ ಮೊದಲ ಮೂವತ್ತು ವರ್ಷಗಳಲ್ಲೇ ಈ ಕಂದಾಯದ ಮೊತ್ತ 700 ದಶಲಕ್ಷ ಪೌಂಡುಗಳಿಗೂ ಹೆಚ್ಚಾಗಿತ್ತು. ಇದರಲ್ಲಿ ಶೇಕಡಾ 12ರಷ್ಟು ಚಕ್ರಬಡ್ಡಿಯೂ ಸೇರಿತ್ತು. ಕಂದಾಯವನ್ನು ಪೂರ್ಣವಾಗಿ ಸಂದಾಯ ಮಾಡಲಾಗದಿದ್ದ ಉಳಿದ ಬಾಕಿ ಹಣವನ್ನು ಸಾಲವೆಂದು ಪರಿಗಣಿಸಲಾಗುತ್ತಿತ್ತು. ಅದರ ಮೇಲೂ ನಾವು ಮತ್ತೆ ಬಡ್ಡಿಯನ್ನು ತೆರಬೇಕಿತ್ತು.

1858ರಲ್ಲಿ ಮಹಾರಾಣಿ ವಿಕ್ಟೋರಿಯಾ ನಮ್ಮ ರಾಷ್ಟ್ರವನ್ನು ಈಸ್ಟ್ ಇಂಡಿಯಾ ಕಂಪನಿಯವರಿಂದ ಕೊಂಡುಕೊಂಡಾಗ, ಆ ಬೆಲೆಯನ್ನು ತೆತ್ತುದು ನಮ್ಮ ಜನರೇ. ಆಕೆಯ ಸರ್ಕಾರ ಈಸ್ಟ್ ಇಂಡಿಯಾ ಕಂಪನಿಗೆ ಮುಕ್ತ ಹಸ್ತದಿಂದ ತುಂಬಿಕೊಟ್ಟ ಹಣವನ್ನು "ಭಾರತದ ಸಾಲ"ಕ್ಕೆ ಜಮಾಯಿಸಲಾಯಿತು. ಇದಕ್ಕಿಂತ ಹಾಸ್ಯಾಸ್ಪದ ಸಂಗತಿ ಮತ್ತೇನಿದೆ ? ಬ್ರಿಟಿಷರು ನಮ್ಮನ್ನು ಖರೀದಿಸಿದ ಬೆಲೆಯನ್ನು ನಾವೇ ತೆರಬೇಕಾಯಿತು.

"ಭಾರತದ ಸಾಲ"ದ ಮೇಲೆ ತೆರಲಾದ ವಾರ್ಷಿಕ ಬಡ್ಡಿ "ಹೋಮ್ ಛಾರ್ಜ್"ನ ಅಂದರೆ ಭಾರತ ಬ್ರಿಟನ್ನಿಗೆ ಸಂದಾಯ ಮಾಡುತ್ತಿದ್ದ ತೆರದ ಒಂದು ಮುಖ್ಯ ಅಂಶವಾಗಿತ್ತು. 1901–1902ರಲ್ಲೇ "ಹೋಮ್ ಛಾರ್ಜ್" ಸುಮಾರು 17 ದಶಲಕ್ಷ ಪೌಂಡುಗಳಷ್ಟಿತ್ತು. ಇದು ಮತ್ತು ಇದರೊಡನೆ ಬ್ರಿಟಿಷ್ ಅಧಿಕಾರಿಗಳು ತಮ್ಮ ಕುಟುಂಬಗಳಿಗೆ ಕಳಿಸುತ್ತಿದ್ದ ಹಣವೇ, ಆ ವರ್ಷ ಸಂಗ್ರಹಿಸಲಾದ ಕಂದಾಯದ ಅರ್ಧದಷ್ಟಿರುತ್ತಿತ್ತು. ಅಮೆರಿಕದ ಖ್ಯಾತ ಇತಿಹಾಸಜ್ಞ ವಿಲ್ ಡ್ಯೂರಾಂಟ್ ಹೇಳಿದಂತೆ, "ಈಗ ಶೋಷಣೆ ಕಾನೂನಿನ ಎಲ್ಲಾ ಆಕಾರಗಳಲ್ಲೂ ಮೇಳೈಸಿದೆ..." ಕ್ರೌರ್ಯಕ್ಕೆ ಡಂಭಾಚಾರವೂ ಮಿಳಿತವಾಗಿದರೋಡೆ ಮುಂದುವರೆದೇ ಇದೆ."

Sri Vidyabharathi Book Centre, Sringeri



ಬ್ರಿಟಿ
ದಾಸ್ಯ
ಭಾ

ಭೂಕಂದಾಯದ

ಬೆಳೆಗಾರರಿಂದ ಕ್ಲುಪ್ತಕಾಲದಲ್ಲಿ ಕಂದಾಯ ವಸೂಲಿಗಾಗಿ ಚಿತ್ರಹಿಂಸೆಯ ಮಾರ್ಗವನ್ನು ಬಳಸುವುದು ಅಪೂರ್ವವಾದುದೇನೂ ಆಗಿರಲಿಲ್ಲ. ಮದ್ರಾಸ್ ಪ್ರಾಂತ್ಯದಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿದ್ದ ಚಿತ್ರಹಿಂಸೆಯ ವಿಧಾನಗಳೆಂದರೆ : "ಮನುಷ್ಯನನ್ನು ಬಿಸಿಲಿನಲ್ಲಿ ನಿಲ್ಲಿಸುವುದು, ಅವನು ಊಟ ಮಾಡಲು ಅಥವಾ ಪ್ರಕೃತಿಯ ಭಾದೆಗಳನ್ನು ತೀರಿಸಿಕೊಳ್ಳಲೂ ಬಿಡದಿರುವುದು ; ಸೆರೆವಾಸ. ಅವನ ದನಕರುಗಳನ್ನು ಮೇಯಲು ಹೋಗದಂತೆ ಅಡ್ಡಿಪಡಿಸುವುದು, ಆಳಿನ ದೇಖರೇಕೆಗಳನ್ನು ಅವನು ನೋಡಿಕೊಳ್ಳುವಂತೆ ಒತ್ತಾಯಿಸುವುದು, ಮನುಷ್ಯನನ್ನು ಬಗ್ಗಿಸಿ ಕಟ್ಟಿ ಹಾಕುವುದು, ಒಂದಕ್ಕೊಂದು ಹೆಣೆದ ಬೆರಳುಗಳನ್ನು ತಿರುಚುವುದು, ಬಿವುಟುವುದು, ಕಪಾಳಕ್ಕೆ ಬಾರಿಸುವುದು,

CC-O. In Public Domain. Digitized by eGangotri

ಷರ
ದಲಿ
ರತ

ಲಿಗೆಗಾಗಿ ಚಿತ್ರಹಿಂಸೆ

ಮೇಲೆ ಕೆಳಗೆನ್ನದೆ ಬಾರಿಸುವುದು, ಕಿವಿ ಹಿಂಡುವುದು...

...ಕೆಳಜಾತಿಯವನನ್ನು ಅವನ ಬೆನ್ನ ಮೇಲೆ ಕೂಡಿಸುವುದು, ಅಪರಾಧಿಗಳಿಬ್ಬರ ತಲೆಗಳನ್ನು ಪರಸ್ಪರ ಘಟ್ಟಿಸುವುದು, ಇಬ್ಬರ ತಲೆಗೂದಲನ್ನೂ ಸೇರಿಸಿ ಗಂಟು ಹಾಕುವುದು, ಉಗ್ರಾಣದಲ್ಲಿ ತಳ್ಳುವುದು, ಕತ್ತೆ ಅಥವಾ ಎಮ್ಮೆಯ ಬಾಲಕ್ಕೆ ಅವನ ತಲೆಗೂದಲನ್ನು ಕಟ್ಟುವುದು, ಎಲುಬುಗಳ ಅಥವಾ ಬೇರೆ ಅಸಹ್ಯವಾದ, ಅಪಮಾನಕರವಾದ ವಸ್ತುಗಳ ಮಾಲೆಯನ್ನು ಕೊರಳಿಗೆ ತೊಡಿಸುವುದು ಮತ್ತು ಆಗಿಂದಾಗ ಕ್ರೂರವಾದ ಶಿಸ್ತಿನಕ್ರಮ ಕೈಗೊಳ್ಳುವುದು."

ಏಪ್ರಿಲ್ 16, 1855ರ ವಿಚಾರಣಾ ಆಯೋಗದಿಂದ ಉದ್ಧೃತ—ರಮೇಶ್‌ದತ್

ಕ್ಷಾಮದಿಂದಾದ ಸಾವುಗಳು

19ನೇ ಶತಮಾನದ ಮೊದಲ ಪೂರ್ವಾರ್ಧದಲ್ಲಿ ನಾವು ದೇಶದ ವಿವಿಧ ಭಾಗಗಳಲ್ಲಿ ಏಳು ಭೀಕರ ಕ್ಷಾಮಗಳನ್ನು ಎದುರಿಸಬೇಕಾಯಿತು. ಒಂದೂವರೆ ದಶಲಕ್ಷ ಜನರು ಮೃತ್ಯುವಿಗೆ ತುತ್ತಾದರೆಂದು ದಾಖಲೆಗಳಿಂದ ತಿಳಿದು ಬರುತ್ತದೆ. 19ನೇ ಶತಮಾನದ ಉತ್ತರಾರ್ಧದಲ್ಲಿ ಇಪ್ಪತ್ನಾಲ್ಕು ಬಾರಿ ಕ್ಷಾಮ ತಲೆದೋರಿ 20 ದಶಲಕ್ಷಕ್ಕೂ ಹೆಚ್ಚು ಜನರು ಸಾವಿಗೀಡಾದರು. ಇದಕ್ಕೆ ಕಾರಣ ಆಹಾರಧಾನ್ಯಗಳ ಅಭಾವವಂತೂ ಅಲ್ಲ. ಕ್ಷಾಮ ಹೆಚ್ಚೂ ಕಡಿಮೆ ಮಾನವ ನಿರ್ಮಿತವಾದುದೇ.

ರೋಮೇಶ್ ದತ್ ಹೇಳುವಂತೆ "...ಭಾರತದಲ್ಲಿ ಫಸಲು ಸಂಪೂರ್ಣವಾಗಿ ಎಂದಿಗೂ ಕೈಕೊಟ್ಟಿಲ್ಲ. ಯಾವ ಒಂದು ವರ್ಷದಲ್ಲೂ ದೇಶದ ಜನತೆಗೆ ಸಾಕಾಗದಷ್ಟು ಆಹಾರದ ಅಭಾವ ಉಂಟಾಗಿರಲೇ ಇಲ್ಲ. ಒಂದು ಪ್ರಾಂತ್ಯದಲ್ಲಿ ದುರ್ಭಿಕ್ಷವಾದಾಗ ಆ ಜನರು ಉತ್ತಮ ಫಸಲು ಪಡೆದ ನೆರೆಯ ಪ್ರಾಂತ್ಯಗಳಿಂದ ಆಹಾರವಸ್ತುಗಳನ್ನು ಕೊಳ್ಳಲು ಸಾಧ್ಯವಾಗಲಿಲ್ಲ ಎಂದರೆ ಆಲ್ಲಿ ಏನೋ ತಪ್ಪಾಗಿದೆ."

ಬ್ರಿಟಿಷರ ಆಗಮನಕ್ಕೆ ಮುಂಚೆಯೂ ನಮ್ಮ ರೈತರು ಅನಾವೃಷ್ಟಿಯನ್ನೂ, ಅಭಾವವನ್ನೂ ಕಂಡೇ ಇದ್ದರು. ಆ ದಿನಗಳಲ್ಲಿ ಅವರು ವಿವಿಧ ಗುಡಿ ಕೈಗಾರಿಕೆಗಳಿಂದ ಸಂಪಾದಿಸಿದ ಹೆಚ್ಚಿನ ಆದಾಯದಿಂದ ಫಸಲು ಚೆನ್ನಾಗಿದ್ದ ಭಾಗಗಳಿಂದ ಆಹಾರಧಾನ್ಯಗಳನ್ನು ಖರೀದಿಸುತ್ತಿದ್ದರು.

ಆದರೆ ಸಾಮ್ರಾಜ್ಯ ನೋಡಿದಂತೆ, ಬ್ರಿಟಿಷರ ಆಗಮನವಾಯಿತು. ಆದರೊಡನೆ ಈ ಆದಾಯದ ಮೂಲವನ್ನೇ ನಿರ್ದಾಕ್ಷಿಣ್ಯವಾಗಿ ಮತ್ತು ಯಶಸ್ವಿಯಾಗಿ ನಾಶಪಡಿಸಿಲಾಯಿತು; ನಮ್ಮ ರೈತರು ಪೂರ್ಣವಾಗಿ ಕೃಷಿಯನ್ನೇ ಆಧರಿಸುವಂತಾಯಿತು—ಅದೂ ಯೋಗ್ಯ ನೀರಾವರಿ ವ್ಯವಸ್ಥೆಯೂ ಇಲ್ಲದಿದ್ದಾಗ. ತಮ್ಮ ದಿನನಿತ್ಯದ ಅಗತ್ಯಗಳನ್ನು ಮತ್ತು ಸರಕಾರದ ಕ್ರೂರ ಕಂದಾಯದ ಬೇಡಿಕೆಗಳನ್ನು ಪೂರೈಸಿದನಂತರ ಅವರ ಬಳಿ ಹಣವೇ ಉಳಿಯುತ್ತಿರಲಿಲ್ಲ. ಆದ್ದರಿಂದ ವ್ಯವಸಾಯದ ಮೂಲಭೂತ ಅವಶ್ಯಕತೆಗಳಾದ ಎತ್ತು ಮತ್ತು ನೇಗಿಲುಗಳಿಗಾಗಿ ಅವರು ಲೇವಾದೇವಿಗಾರರ ಕಪಿಮುಷ್ಟಿಯಲ್ಲಿ ಸಿಕ್ಕು ನಲುಗಿದರು. ಆಹಾರಧಾನ್ಯಗಳೇನೋ ಸಮೃದ್ಧವಾಗಿದ್ದವು, ಆದರೆ ನಮ್ಮ ರೈತರ ಪಾಲಿಗಲ್ಲ. ತೀವ್ರ ಬರಗಾಲ ಪೀಡಿತ ವರ್ಷವೆಂದು ಪರಿಗಣಿಸಲಾದ 1897–1898ರಲ್ಲೇ ಬ್ರಿಟಿಷ್ ಸರಕಾರ 17 ದಶಲಕ್ಷ ಪೌಂಡುಗಳನ್ನು ಭೂಕಂದಾಯವಾಗಿ ಸಂಗ್ರಹಿಸಿತು. ಬ್ರಿಟಿಷ್ ಪಡೆಕರು 10 ದಶಲಕ್ಷ ಪೌಂಡ್ ಬೆಲೆಯ ಆಹಾರಧಾನ್ಯವನ್ನು ರಫ್ತು ಮಾಡಿದರು. ತನ್ನ ವ್ಯವಸ್ಥಿತ ಆಡಳಿತ ನಿರ್ವಹಣೆಯಿಂದ ಸರಕಾರ ಸಂತುಷ್ಟವಾಗಿತ್ತು. ಬರಗಾಲ ಪೀಡಿತ ವರ್ಷದಲ್ಲೂ ಆದು ತನ್ನ ಬಾಕಿಯನ್ನು ಸಂಗ್ರಹಿಸುವುದರಲ್ಲಿ ಸಫಲವಾಗಿತ್ತು. ಬ್ರಿಟಿಷ್ ವರ್ತಕರೂ ಸಂತಸಗೊಂಡಿದ್ದರು. ಅವರು ದಾಖಲೆ ಮೀರಿ ಲಾಭ ಗಳಿಸಿದ್ದರು. ನಮ್ಮ ಲಕ್ಷಾಂತರ ಜನ ರೈತರು ಹಸಿವೆ ತಾಳಲಾರದೆ ಕೊರಗಿ ಕೊರಗಿ ನಿಧಾನವಾಗಿ ಕೊನೆಯುಸಿರೆಳೆದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವೆಂದೂ ಮರೆಯದಿರೋಣ....

ನಮ್ಮಲ್ಲಿ ನಾಯಕತ್ವ ಇನ್ನೂ ಮೂಡಿರದಿದ್ದಾಗ, ಅನೇಕ ಇಂಗ್ಲೀಷರು ನಮ್ಮ ಜೀವನ ಮಟ್ಟ ಸುಧಾರಿಸಲು ಹಾಗೂ ನಮಗೆ ಅವಕಾಶಗಳನ್ನು ದೊರಕಿಸಿಕೊಡಲು ಶ್ರಮಿಸಿದರು. ನಮಗೆ ಮಾರಕವಾದಂಥ ತಮ್ಮ ಸ್ವದೇಶಿ ಬಾಂಧವರ ನೀತಿಗಳನ್ನು ಹಾಗೂ ವರ್ತನೆಗಳನ್ನು ಕಟುವಾಗಿ ಟೀಕಿಸಲು ಈ ಗೆಳೆಯರು ಹಿಂದಿರಿಯಲಿಲ್ಲ. ಈ ಪುಸ್ತಕದಲ್ಲಿ ವರ್ಣಿತವಾದ ಬ್ರಿಟಿಷ್ ಆಡಳಿತದ ಕರಾಳ ಭಾಗವು ಅವರ ವರದಿ, ಬರವಣಿಗೆ ಹಾಗೂ ಸಂಗ್ರಹಗಳನ್ನಾಧರಿಸಿದೆ. ಈ ಮಹಾನುಭಾವರು ತಮ್ಮ ಕಾಲದಲ್ಲಿಯೇ ಭವಿಷ್ಯದ ಬಗ್ಗೆಯೂ ಚಿಂತನ ನಡೆಸಿ, ಭಾರತೀಯರು ಸ್ವತಂತ್ರರಾಗಿ ಆಳುವ ಕಾಲ ಬರುವುದೆಂಬುದನ್ನು ಮೊದಲೇ ಮನಗಂಡಿದ್ದರು. ಅಂಥ ಕೆಲವು ಮಹಾನುಭಾವರ ಆಯ್ದ ಕೆಲವು ಬರಹಗಳು ಇಲ್ಲಿ ನಿರೂಪಿತವಾಗಿವೆ :

ಮೌಂಟ್‌ಸ್ಟುವರ್ಟ್ ಎಲ್ಫಿನ್‌ಸ್ಟೋನ್
ಬೊಂಬಾಯಿಯ ಗವರ್ನರ್ (1819–1827)

ನಮ್ಮ ದೇಶೀಯರು ಹೆಚ್ಚಿನ ಸಂಖ್ಯೆಯಲ್ಲಿ ಆಡಳಿತಾತ್ಮಕ ಕಾರ್ಯಗಳಲ್ಲಿ ತೊಡಗಲು ಮತ್ತು ಆ ಪ್ರಾಂತ್ಯದಲ್ಲಿ ವಿದ್ಯಾಭ್ಯಾಸ ಪ್ರಸಾರ ವ್ಯಾಪಕವಾಗುವಂತೆ ಪ್ರೋತ್ಸಾಹಿಸಿದವನು ಈತನೇ. ಈತನ ಶಿಬಿರಕ್ಕೊಮ್ಮೆ ಭೇಟಿ ನೀಡಿದ್ದ ಅತಿಥಿಯೊಬ್ಬ ಈತನ ಸಂಗ್ರಹದಲ್ಲಿದ್ದ ಮುದ್ರಿತ ಮರಾಠಿ ಪುಸ್ತಕಗಳ ಹೊರೆಯನ್ನು ಕಂಡು ಇವು ನಿಮಗೇಕೆ ? ಎಂದು ಪ್ರಶ್ನಿಸಿದ. "ಸ್ಥಳೀಯರಿಗೆ ಶಿಕ್ಷಣ ನೀಡಲು" ಎಂದುತ್ತರಿಸಿದ ಎಲ್ಫಿನ್‌ಸ್ಟೋನ್. "ಆದರೆ, ಇದು ಯುರೋಪಿಗೆ ನಾವು ಹಿಂತಿರುಗಲು ರಾಜಮಾರ್ಗ" ಎಂದೂ ಹೇಳಿದ.

ಸರ್ ಜಾರ್ಜ್ ವಿನ್‌ಗೇಟ್

"ಭಾರತದೊಡನೆ ನಮ್ಮ ಆರ್ಥಿಕ ಸಂಬಂಧಗಳು" ಪುಸ್ತಕದಲ್ಲಿ

"ಭಾರತದ ಆರ್ಥಿಕ ಪರಿಸ್ಥಿತಿಗೆ ಸಂಬಂಧಪಟ್ಟಂತೆ ಗ್ರೇಟ್ ಬ್ರಿಟನ್ನಿಗೆ ಸಲ್ಲಿಸಲಾದ ಕಾಣಿಕೆ ನಮ್ಮ ಸದ್ಯದ ನೀತಿಯಲ್ಲಿ ಆಕ್ಷೇಪಾರ್ಹವಾದುದು (ತೆರಿಗೆ ಎತ್ತಲಾದ ಹಣವನ್ನು ಆ ದೇಶದಲ್ಲಿಯೇ ಪೆಚ್ಚ ಮಾಡುವುದರಲ್ಲಿಯೂ ಮತ್ತು ತೆರಿಗೆ ಎತ್ತಲಾದ ಹಣವನ್ನು ಬೇರೆ ದೇಶವೊಂದರಲ್ಲಿ ಪೆಚ್ಚ ಮಾಡುವುದರಲ್ಲಿಯೂ, ಅವುಗಳು ಉಂಟುಮಾಡುವ ಪರಿಣಾಮಗಳು ಸಂಪೂರ್ಣ ಭಿನ್ನವಾಗಿರುತ್ತವೆ). ಮೊದಲ ಘಟನೆಯಲ್ಲಿ ಜನತೆಯಿಂದ ಸಂಗ್ರಹಿಸಲಾದ ತೆರಿಗೆಯನ್ನೂ ಸರಕಾರದ ಸೇವೆಯಲ್ಲಿ ನಿರತರಾದ ಉದ್ಯೋಗಿಗಳಿಗೆ ನೀಡಲಾಗುತ್ತದೆ ; ಅವರ ಖರ್ಚುಗಳಿಂದ ಆ ಹಣ ಮತ್ತೆ ಕೈಗಾರಿಕೋದ್ಯಮಿಗಳಿಗೇ ಸಿಕ್ಕುತ್ತದೆ. ಆದರಿಂದಾಗಿ ಹಣದ ವಿಭಾಗೀಕರಣದಲ್ಲಿ ಹೆಚ್ಚು ಕಡಿಮೆಯಾದರೂ, ರಾಷ್ಟ್ರದ ಆದಾಯಕ್ಕೇನೂ ಧಕ್ಕೆ ಉಂಟಾಗುವುದಿಲ್ಲ.

"... ಆದರೆ, ತೆರಿಗೆಯಿಂದ ಸಂಗ್ರಹಿಸಿದ ಹಣವನ್ನು ಅದೇ ದೇಶದಲ್ಲಿಯೇ ಪೆಚ್ಚ ಮಾಡದಿದ್ದರೆ, ಪರಿಸ್ಥಿತಿ ಬೇರೆಯೇ ಆಗುತ್ತದೆ. ಇಂಥ ಸಂದರ್ಭದಲ್ಲಿ (... ತೆರಿಗೆ ಎತ್ತಲಾದ ದೇಶಕ್ಕೆ ನಷ್ಟ ವಿರ್ಪಟ್ಟು, ಆ ಸಂಪೂರ್ಣ ಮೊತ್ತವೂ ನಿರ್ನಾಮವಾಗಿ ಹೋಗುತ್ತದೆ. ಏಕೆಂದರೆ ತೆರಿಗೆ ನೀಡಿದ ದೇಶಕ್ಕೆ-ಖರ್ಚು ಮಾಡಲಾದ ದೇಶದಿಂದ, ಕಿಂಚಿತ್ತು ಹಣವೂ ಯಾವುದೇ ವಿಧದಲ್ಲೂ ಹಿಂದಕ್ಕೆ ಬಾರದು."



ಸರ್ ಜಾನ್ ಷೋರ್

ಗವರ್ನರ್ ಜನರಲ್ (1873–1875)

ಭಾರತದ ಪ್ರಶಾಂತ ದಿನಗಳು ಕಳೆದಿವೆ. ಒಮ್ಮೆ ಭಾರತ ಹೊಂದಿದ್ದ ಅಪಾರ ಸಂಪತ್ತಿನ ದೊಡ್ಡ ಭಾಗ ಸೋರಿಹೋಗಿದೆ. ಭಾರತದ ಶಕ್ತಿಸಾಮರ್ಥ್ಯಗಳಿಗೆ ಕ್ಷುದ್ರ ಅರಾಜಕತೆಯಿಂದಾಗಿ ಧಕ್ಕೆ ಒದಗಿದೆ. ಕೆಲವೇ ಜನರ ಒಳಿತಿಗಾಗಿ ಲಕ್ಷಾಂತರ ಜನರ ಹಿತಾಸಕ್ತಿಗಳು ಬಲಿಯಾಗಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ನಲ್ ವಾಕರ್

ಒಬ್ಬ ಬ್ರಿಟಿಷ್ ಅಧಿಕಾರಿ

"ಕಂಪನಿಯ ಪ್ರಜಾಸತ್ತಾತ್ಮಕ ಸರ್ಕಾರದ ಪ್ರಮುಖ ವೈಶಿಷ್ಟ್ಯವೆಂದರೆ, ದೇಶೀಯ ನಿಯೋಗಿಗಳ ಸಂಪೂರ್ಣ ಬಹಿಷ್ಕಾರ. ದೇಶೀಯರು ಪಡೆದಿದ್ದ ಸರಕಾರಿ ಹುದ್ದೆಗಳೆಂದರೆ ಅವು ಯಾವುದೇ ಯೂರೋಪಿಯನ್ನನ ಮಹಾತ್ವಾಕಾಂಕ್ಷೆಗೆ ಗುರಿಯಾಗದ ತೀರ ಕೆಳ ದರ್ಜೆಯ ಹುದ್ದೆಗಳು; ಈ ಹುದ್ದೆಗಳಿಗೆ ಅವರು ಪಡೆಯುತ್ತಿದ್ದ ಸಂಬಳ ತಮ್ಮ ಹಾಗೂ ತಮ್ಮ ಕುಟುಂಬದ ಪೋಷಣೆಗೂ ಸಾಕಾಗುತ್ತಿರಲಿಲ್ಲ. ಅವರಿಗೆ ನೀಡಲಾದ ಸಂಬಳ ತುಂಬಾ ಕಡಿಮೆ— ಅದಂತಿರಲಿ ! ಅವರ ಬಗ್ಗೆ ಇದ್ದ ಅಪಸಂಬಿಕೆ, ಅವರನ್ನು ನಡೆಸಿಕೊಳ್ಳಲಾಗುತ್ತಿದ್ದ ರೀತಿ ಎಲ್ಲವೂ ತೀವ್ರ ಜಿಗುಪ್ಸೆಯನ್ನು ಉಂಟು ಮಾಡುತ್ತಿದ್ದವು...

"ದೇಶೀಯರನ್ನು ಪ್ರತಿಷ್ಠಿತ ಮತ್ತು ಲಾಭದಾಯಕ ಹುದ್ದೆಗಳಿಗೆ ನೇಮಕ ಮಾಡುವುದರಿಂದ ಮಾತ್ರ ಅವರನ್ನು ಸಂತೃಪ್ತಗೊಳಿಸಲು ಸಾಧ್ಯ. ತಮ್ಮ ಜೀವನದ ಮಹತ್ಸಾಧನೆಯ ಗುರಿ ತಲಪುವ ಎಲ್ಲ ಮಾರ್ಗಗಳನ್ನೂ ಮುಚ್ಚಿದರೂ ಕೂಡಾ, ತಮ್ಮ ಆಸ್ತಿ, ಪಾಸ್ತಿ ಸುರಕ್ಷಿತವಾಗಿದೆ ಎಂಬುದಷ್ಟರಿಂದಲೇ ಜನಸಾಮಾನ್ಯರು ತೃಪ್ತರಾಗುತ್ತಾರೆ ಎಂಬುದು ದುರಭಿಮಾನದ ಪರಾಕಾಷ್ಠೆ. ತೇಜೋವಧೆಗೀಡುಮಾಡಿ ಪ್ರತ್ಯೇಕವಾಗಿಡುವುದರಿಂದ ಅದು ಪ್ರತಿಭೆ ಸಾಮರ್ಥ್ಯಗಳನ್ನು ಚಿವುಟಿಹಾಕುತ್ತದೆ. ಪೂನೆತನದ ಗೌರವವನ್ನು ಮಣ್ಣುಪಾಲಾಗಿಸುತ್ತದೆ ಮತ್ತು ದುರ್ಬಲರ ಹಾಗೂ ಅಯೋಗ್ಯರ ವಿನಃ ಮಿಕ್ಕೆಲ್ಲರ ಎದೆಗುಂದಿಸುತ್ತದೆ. ಈ ವೈರತ್ವದ ಮೂಲ ಎಲ್ಲಿಯವರೆಗೂ ಉಳಿಯುವುದೋ ಅಲ್ಲಿಯವರೆಗೂ ಬ್ರಿಟಿಷ್ ಸರಕಾರ ಬಲಾತ್ಕಾರವಾಗಿ ಹೊರೆಯನ್ನು ಹೇರುತ್ತಿದೆ ಎಂದೇ ಭಾವಿಸಲಾಗುವುದು..."

ಮಾಂಟಗೋಮೇರಿ ಮಾರ್ಟಿನ್

"ಈಸ್ಟರ್ನ್ ಇಂಡಿಯಾ"ದಲ್ಲಿ

"ವರ್ಷವೊಂದಕ್ಕೆ ಸತತವಾಗಿ ಮೂರು ಅಥವಾ ನಾಲ್ಕು ಪೌಂಡುಗಳನ್ನು ಭಾರತದಂಥ ದೂರ ದೇಶದಿಂದ ಒಂದೇ ಸಮನೆ ಕಸಿದುಕೊಂಡು, ಆ ಹಣವನ್ನು ಯಾವ ರೀತಿಯಲ್ಲೂ ಮರಳಿಸದೆ ಇರುವುದರ ದುಷ್ಪರಿಣಾಮಗಳನ್ನು ನಿವಾರಿಸುವುದು ಮಾನವನ ಜಾಣ್ಮೆಗೆ ಸಾಧ್ಯವಾಗದ ಕೆಲಸ ಎಂಬುದು ನನ್ನ ನಂಬಿಕೆ."

ಜಾನ್ ಸುಲ್ಲಿವನ್

ಒಬ್ಬ ಬ್ರಿಟಿಷ್ ಅಧಿಕಾರಿ

"..ಅವರು (ಭಾರತದ ಜನತೆ) ತಮ್ಮ ಮೇಲೆ ಹೇರುವ ತೆರಿಗೆಗಳ ಬಗ್ಗೆಯಾಗಲಿ ತಾವು ಕಡ್ಡಾಯವಾಗಿ ಪಾಲಿಸಲೇ ಬೇಕಾದಂಥ ಕಾನೂನುಗಳನ್ನು ರೂಪಿಸುವುದರ ಬಗ್ಗೆಯಾಗಲಿ ದನಿ ಎತ್ತುವಂತಿಲ್ಲ. ಅಲ್ಲದೆ ತಮ್ಮ ದೇಶದ ಆಡಳಿತ ನಿರ್ವಹಣೆಯಲ್ಲಿ ಅವರು ಯಾವ ಪಾತ್ರವನ್ನೂ ವಹಿಸುವಂತಿಲ್ಲ; ಇಂಥ ಕರ್ತವ್ಯಗಳನ್ನು ನಿರ್ವಹಿಸಲು ಬೇಕಾದಂಥ ಮಾನಸಿಕ ಹಾಗೂ ನೈತಿಕ ಅರ್ಹತೆಗಳಿಲ್ಲವೆಂಬ ದುರಹಂಕಾರದ ಹಾಗೂ ಅಪಮಾನಕರವಾದ ಪೊಳ್ಳು ನೆಪಗಳಿಂದಾಗಿ ಅವರು ಈ ಹಕ್ಕುಗಳಿಂದ ವಂಚಿಸಲ್ಪಟ್ಟಿದ್ದಾರೆ."

ಪಲ್ಲಿಯ ವ್ಯವಸಾಯ ಪದ್ಧತಿ, ಕುಶಲಕಲೆಗಳಲ್ಲಿ ಯಾರೂ ವೀರಿಸಲಾಗದಂಥ ನೈಪುಣ್ಯತೆ...ಪ್ರತಿಯೊಂದು ಹಳ್ಳಿಯಲ್ಲೂ ಓದು, ಬರಹ ಮತ್ತು ಗಣಿತ ಕಲಿಸಲು ಪಾಠಶಾಲೆಗಳು, ಪರಸ್ಪರ ಆದರ ಸತ್ಕಾರ ಮತ್ತು ಔದಾರ್ಯ, ಸ್ತ್ರೀಕುಲದ ಬಗ್ಗೆ ಗೌರವ, ದೃಢವಿಶ್ವಾಸ ಹಾಗೂ ಸೌಜನ್ಯ —ಇವೆಲ್ಲವೂ ಮಾನವನ ನಾಗರೀಕತೆಯನ್ನು ಸೂಚಿಸುತ್ತವೆ ಎಂದಾದರೆ, ಹಿಂದೂಗಳು ಐರೋಪ್ಯ ದೇಶಗಳ ಜನರಿಗೆ ಯಾವ ರೀತಿಯಲ್ಲೂ ಕೀಳಿಲ್ಲ. ನಾಗರೀಕತೆ ಎರಡು ರಾಷ್ಟ್ರಗಳ ನಡುವಣ ವಾಣಿಜ್ಯದ ವಸ್ತುವೆಂದು ಪರಿಗಣಿಸಲ್ಪಟ್ಟಿದೆ. ಈ ದೇಶ (ಇಂಗ್ಲೆಂಡ್) ಸರಕಿನ ಆಮದಿನಿಂದ ಲಾಭ ಪಡೆಯುತ್ತದೆ ಎಂಬುದು ನನ್ನ ನಂಬುಗೆ...

"...ಭಾರತದೊಡನೆ ನಮ್ಮ ಬಾಂಧವ್ಯ ಎಂದು ಮುಗಿಯುವುದೋ, ಆಗ ನಮ್ಮ ಆಳ್ವಿಕೆಯ ಪರಿಣಾಮವಾಗಿ ಅಲ್ಲಿನ ಜನರು ಕುಗ್ಗಿಹೋಗಿ, ನಾವು ಮತ್ತೆ ಅವರನ್ನು ಕಂಡಾಗ ಸ್ವಯಮಾಡಳಿತದಲ್ಲಿ ಅವರಿಗೆ ತಾವು ಅಸಮರ್ಥರು ಎನಿಸಬಾರದು ಎಂಬುದರ ಬಗ್ಗೆ ನಾವು ಜಾಗರೂಕತೆ ವಹಿಸಬೇಕು.. ನಿಸ್ಸಂದೇಹವಾಗಿ ಅದು ನಮ್ಮ ಗುರಿಯೂ ಆಗಬೇಕು.

ಥಾಮಸ್ ಮುನ್ರೋ

ಮದರಾಸಿನ ಗವರ್ನರ್ (1820–1827)



ಲಾರ್ಡ್ ರಿಪನ್

(ವೈಸರಾಯ್ ಮತ್ತು ಭಾರತದ ಗವರ್ನರ್ ಜನರಲ್ (1880–1884)

ಅವನು ಜಿಲ್ಲೆ ಮತ್ತು ನಗರಗಳಲ್ಲಿ ಸ್ಥಾನಿಕ ಆಡಳಿತವನ್ನು ಜಾರಿಗೆ ತಂದನು. ದುಷ್ಕೃತ್ಯಗಳನ್ನು ಮಾಡಿದ ಯುರೋಪಿಯನ್ನರನ್ನು ನಮ್ಮ ನ್ಯಾಯಾಧಿಕಾರಿಗಳೇ ವಿಚಾರಣೆ ನಡೆಸಬೇಕು ಎಂಬ ಸಲಹೆಯಿಂದಾಗಿ, ಅವನು ತನ್ನ ದೇಶಬಾಂಧವರ ಟೀಕೆಗೆ ಗುರಿಯಾದನಾದರೂ ಈತ 1884ರಲ್ಲಿ ಭಾರತವನ್ನು ಬಿಟ್ಟು ಹೋಗುವಾಗ ನಮ್ಮ ದೇಶದ ಜನತೆಯಿಂದ ಈತನಿಗೆ ಪ್ರಚಂಡ ಜಯಘೋಷ ದೊರೆಯಿತು.

Sri Vidyabharathi Book Centre, Shringeri

CC-0. In Public Domain. Digitized by eGangotri

ನಮ್ಮ ದೇಶದ ಪ್ರಜೆಗಳೆಲ್ಲ ಕೈಸೇರಬೇಕಾದ ಧನವನ್ನು ಬ್ರಿಟಿಷರು ಬಿಡಲಿಲ್ಲ. ಅವರು ಉದ್ಯೋಗ ಮತ್ತು ವೃತ್ತಿಗಳ ಮೇಲೆ ಹೇರಿದ ಮುತಾರ್ಫ ಎಂಬ ಕರ ತೆರಬೇಕಾಗಿತ್ತು.

ಅಜ್ಜಿ, ನೀನು ಆ ತರಕಾರಿ ಮಾರುತ್ತಿದ್ದೀಯೇನು?

ಹೌದು ಸ್ವಾಮಿ. ವಿಷಯೇನಾದರೂ ಬೇಕೆ?

ತರಕಾರಿ ಮಾರಿದ್ದಕ್ಕೆ ನಿನ್ನಿಂದ ಮುತಾರ್ಫ ಸಂಗ್ರಹಿಸಲು ಬಂದಿದ್ದೇನೆ.

ಅದು ಏನು?

ನೀನು ಹಣ ಸಂಪಾದಿಸಲು ಸಾಹೇಬರು ಅನುಮತಿಸಿರುವುದಕ್ಕೆ ನೀನು ತೆರಬೇಕಾದ ಹಣ. ನೇಕಾರರು, ಚರ್ಮಕಾರರು, ಬಡಿಗರು, ಅಕ್ಕಸಾಲಿಗರು, ಬಟ್ಟೆ ವ್ಯಾಪಾರಿಗಳು, ಕಿರಾಣಿ ಅಂಗಡಿಯವರು ಎಲ್ಲರೂ ಅದನ್ನು ತೆರುತ್ತಾರೆ.

ಆದರೆ ನಾನೇಷ್ಟು ಸಂಪಾದಿಸುತ್ತೇನೆ!

ಅದೇನೋ ಇದ್ದರೂ ನೀನು ಈ ಬೀದಿಯಲ್ಲಿ ವ್ಯಾಪಾರ ಮಾಡಿ ಲಾಭ ಗಳಿಸುತ್ತೀ. ಸುಮ್ಮನೆ ತೆತ್ತುಬಿಡು. ಇಲ್ಲದಿದ್ದರೆ ನೀನು ಜೈಲಿಗೆ ಹೋಗುತ್ತೀ.

ನಮ್ಮ ದೇಶಬಾಂಧವರು ಹಿಡಿಗಾಳು ಸಂಪಾದನೆ ಮಾಡಲು ಕಷ್ಟಪಡುತ್ತಿದ್ದರೂ, ಮುತಾರ್ಫ ತೆರಲೇಬೇಕಿತ್ತು. ಆದರೆ ನೂರುಪಟ್ಟು ಲಾಭ ಪಡೆಯುತ್ತಿದ್ದ ಯೂರೋಪಿಯನ್ ವರ್ತಕರು ಏನೂ ತೆರುತ್ತಿರಲಿಲ್ಲ.

ನಮ್ಮ ದೇಶದಲ್ಲಿಯೇ ತಯಾರಿಸಲಾದ ಉಪ್ಪಿನ ಮೇಲೆಯೂ ತೆರಬೇಕಾದ ಕರ ಹಾಗೂ ತೆರಿಗೆ ಮುತಾರ್ಫಾದಿಂತಲೂ ತ್ರಾಸದಾಯಕವಾಗಿತ್ತು. ಈ ದಿನಬಳಕೆಯ ವಸ್ತುವಿಗೆ ಕೆಲವರಿಗೆ ಭೋಗ ವಸ್ತುವಿಗಿಂತಲೂ ಬೆಲೆ ಜಾಸ್ತಿಯಾಗಿತ್ತು.

ಇನ್ನೂ ಸ್ವಲ್ಪ ಉಪ್ಪು ಹಾಕು.

ಏನು ಮತ್ತಷ್ಟೇ?

ಬೇಡ ಬಿಡು! ಈ ಪರದೇಶೀ ರಾಜ್ಯದಲ್ಲಿ ಅದಿಲ್ಲದೆಯೇ ಬದುಕುವುದನ್ನು ನಾನು ಕಲಿಯಬೇಕು.

Sri Vidyabharathi Book Centre, Sringeri

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಹುಟ್ಟು

CC-O. In Public Domain. Digitized by eGangotri

ಬ್ರಿಟಿಷ್ ಆಡಳಿತದಲ್ಲಿ ರಾಜರ ಮತ್ತು ನವಾಬರ ಪರಿಸ್ಥಿತಿಯೂ ಉತ್ತಮವಾಗಿರಲಿಲ್ಲ. ರಾಜನೊಬ್ಬ ಸಂತಾನವಿಲ್ಲದೆ ಮೃತನಾದರೆ, ಅವರು ಆ ರಾಜ್ಯವನ್ನು ತಮ್ಮ ಸ್ವಾಧೀನಪಡಿಸಿಕೊಳ್ಳುತ್ತಿದ್ದರು. ಕುದುರೆಯನ್ನೇರಿಯೋ ಅಥವಾ ಸಾರೋಟುಗಳಲ್ಲಿಯೋ ಕುಳಿತು ಹೋಗುತ್ತಿರುವವರು ಬ್ರಿಟಿಷನೊಬ್ಬ ಅತ್ತ ಬಂದರೆ ಕೆಳಗಿಳಿದು ನಿಂತು ಕಾಯಬೇಕಿತ್ತು.

ಸ್ವಾಮಿ, ಒಬ್ಬ ಫರಂಗಿ!

ನಿಲ್ಲಿಸು ಗಾಡಿ.

ದಾರಿಯಲ್ಲಿನ ಪ್ರತಿಯೊಬ್ಬ ಫರಂಗಿಗೂ ನಮ್ಮಂಥವರು ಸಲಾಮು ಮಾಡಬೇಕಾದ್ದು ದುರದೃಷ್ಟಕರ. ಆದರೆ ನನ್ನ ಒಡೆಯರು ಇಳಿದು ಕಾಯಬೇಕಲ್ಲಾ - ಇದಂತೂ ಅಸಹನೀಯ.

ಅರ್ಹತೆಯಿದ್ದರೂ ಸಾರ್ವಜನಿಕ ಕಛೇರಿಗಳಲ್ಲಿನ ಉನ್ನತ ಹುದ್ದೆಗಳಿಗೆ ನಾವು ಅನರ್ಹರೆಂದು ಭಾವಿಸಲಾಗಿತ್ತು.

ಆ ಫರಂಗಿಗಳು ನಮ್ಮನ್ನು ಅವಮಾನಿಸಿ, ಗಾಯಗೊಳಿಸಿ ಕೊನೆಗೆ ಸಾಯಿಸಿಯೂ ಪಾರಾಗಿಬಿಡುತ್ತಾರೆ.

ನ್ಯಾಯಾಧಿಕಾರಿಯೇ ಫರಂಗಿಯಾಗಿರುವಾಗ, ಇನ್ನೇನು ತಾನೇ ನಿರೀಕ್ಷಿಸಬಲ್ಲೆ?

ಬಲಿಪಶು ನಮ್ಮ ದೇಶದ ಪ್ರಜೆಯಾಗಿದ್ದಲ್ಲಿ ಬ್ರಿಟಿಷ್ ಪಾತಕಿಯು ಕೊಲೆ ಮಾಡಿಯೂ ವಾಸ್ತವವಾಗಿ ಪಾರಾಗಿಬಿಡಬಹುದಿತ್ತು.

ಧಾರ್ಮಿಕ ವಿಷಯಗಳಲ್ಲಿ ನಮ್ಮ ದೇಶವಾಸಿಗಳ ಭಾವನೆಗಳನ್ನು ತೀವ್ರ ಘಾಸಿಗೊಳಿಸಿದ್ದು ಅವರ ಧರ್ಮಪರಿವರ್ತಕರಾದ ಪಾದ್ರಿಗಳು.

ಅವರು ನಮ್ಮ ಮಕ್ಕಳಿಗೆ ಆಮಿಷವನ್ನೊಡ್ಡುತ್ತಾರೆ. ನ್ಯಾಯಾಸ್ಥಾನಗಳೂ ಅವರನ್ನೇ ಬೆಂಬಲಿಸುತ್ತವೆ.

ಫರಂಗಿಗಳೆಲ್ಲರ ಗುರಿಯೊಂದೇ - ಅದು ನಮ್ಮೆಲ್ಲರನ್ನೂ ತಮ್ಮ ಮತಕ್ಕೆ ಮತಾಂತರಗೊಳಿಸಬೇಕೆನ್ನುವುದೇ.

Sri Vidyabharathi Book Centre, Shirdi

CC-O. In Public Domain. Digitized by eGangotri





Sh... Chitra Katha Research Centre, Sringeri

CC-O. In Public Domain. Digitized by eGangotri

1857 ರ ಮಹಾನ್ ದಂಗೆ



29ನೇ ಮಾರ್ಚ್ 1857, ಬೈರಕ್‌ಪುರ (U)	34ನೇ ದೇಶೀಯ ಪದಾತಿಪಡೆಯ ತುಂಗಲ್ ಪಾಂಡೆ ಮೊದಲ ಗುಂಡು ಹಾರಿಸಿದ್ದು.
10ನೇ ಮೇ 1857, ಮೀರತ್ (E)	20ನೇ ಮೇ ದೇ. ಪ. ಪಡೆಯವರು ದಂಗೆ ಎದ್ದು, ಔಪಲಿಯತ್ತ ಮುನ್ನಡೆದರು.
11ನೇ ಮೇ 1857, ದೆಹಲಿ (F)	ದಹಲಿ ನಮ್ಮ ಜನರ ವಶವಾಯಿತು.
13ನೇ ಮೇ 1857, ಫಿರೋಜಪುರ (C)	45ನೇ ರೆಜಿಮೆಂಟ್ ದಂಗೆ ಎದ್ದು ದಹಲಿಯ ನಮ್ಮ ಸೇನೆಯನ್ನು ಸೇರಿಕೊಂಡಿತು.
30ನೇ ಮೇ 1857, ಲಕ್ನೋ (J)	7ನೇ ಔದ್ ರೆಜಿಮೆಂಟ್ ದಂಗೆ ಎದ್ದಿತು.
2ನೇ ಜೂನ್, 1857, ಪೇಶಾವರ್ (A)	55ನೇ ದೇ. ಪ. ಪಡೆಯ ಆಳದುಳಿದ 40 ಜನರು ಗುಂಡಿಗೆ ಬಲಿ.
4ನೇ ಜೂನ್ 1857, ಬನಾರಸ್ (S)	37ನೇ ದೇ. ಪ. ಪಡೆಯ ದಂಗೆ.
4–6ನೇ ಜೂನ್ 1857, ಕಾನ್ಪುರ (M)	2ನೇ ಅಶ್ವದಳ 1ನೇ ಪದಾತಿ ಪಡೆಯೊಡನೆ ದಂಗೆ ಎದ್ದು ನಗರವನ್ನು ಮುತ್ತಿತು.
7ನೇ ಜೂನ್ 1857, ಫೈಜಾಬಾದ್ (O)	ಮೌಲ್ವಿ ಅಹಮದ್ ಷಾ ನಮ್ಮ ನಾಯಕರಲ್ಲೊಬ್ಬರಾದರು.
8ನೇ ಜೂನ್ 1857, ದೆಹಲಿ ರಿಡ್ಜ್ (F)	ಬ್ರಿಟಿಷ್ ಸೇನಾದಳದ ಆಗಮನ.
8ನೇ ಜೂನ್ 1857, ಬನಾರಸ್ (S)	ಜನರಲ್ ನೀಲ್ ದಂಡಶಾಸನ ಆರಂಭಿಸಿದ.
18ನೇ ಜೂನ್ 1857, ಫತೇಗರ್ (H)	10ನೇ ದೇ. ಪ. ಪಡೆಯ ದಂಗೆ.
26–27ನೇ ಜೂನ್ 1857, ಕಾನ್ಪುರ (M)	ಕಾನ್ಪುರ ನಮ್ಮವರ ವಶ. ಶರಣಾರ್ಥಿಗಳ ಸಂಹಾರ.
1ನೇ ಜುಲೈ 1857, ಲಕ್ನೋ (J)	ಬ್ರಿಟಿಷ್ ಆಧಿಕಾರಿಯ ನಿವಾಸಕ್ಕೆ ನಮ್ಮ ಜನರ ಮುತ್ತಿಗೆ.
17ನೇ ಜುಲೈ 1857, ಕಾನ್ಪುರ (M)	ಬ್ರಿಟಿಷರು ಮರಳಿ ಕಾನ್ಪುರವನ್ನು ವಶಪಡಿಸಿಕೊಂಡರು.
12ನೇ ಆಗಸ್ಟ್ 1857, ಜಗದೀಶಪುರ (T)	ಕುವರಸಿಂಹನ ಕೋಟೆಯ ಬಳಿ ಮೊದಲ ಯುದ್ಧ.
16ನೇ ಆಗಸ್ಟ್ 1857, ಬಿಥೂರ್ (N)	ಬಿಥೂರ್‌ನ ವಶ ಬ್ರಿಟಿಷರಿಂದ, ನಾನಾ ಸಾಹೇಬನ ಪಲಾಯನ.
17ನೇ ಆಗಸ್ಟ್ 1857, ಪೂನಮಲ್ಲಿ (V)	ಮದರಾಸಿನ 8ನೇ ದೇ. ಪ. ಪಡೆಯ ಸೈನಿಕರು ತಮ್ಮ ದೇಶೀಯರ ವಿರುದ್ಧ ಹೋರಾಡಲು ಅಸಮ್ಮತಿ ಸೂಚಿಸಿದರು. ಸೇನೆಯ ವಿಸರ್ಜನೆ.
20ನೇ ಸೆಪ್ಟೆಂಬರ್ 1857, ದೆಹಲಿ (F)	ದಹಲಿ ಬ್ರಿಟಿಷರ ಪುನರ್ವಶವಾದದ್ದು.
25ನೇ ಸೆಪ್ಟೆಂಬರ್ 1857, ಲಕ್ನೋ (J)	ಬ್ರಿಟಿಷ್ ಸೇನಾಪಡೆಯ ಆಗಮನ.
23ನೇ ನವೆಂಬರ್ 1857, ಮಂದಸೋರ್ (Q)	ಫಿರೋಜ್ ಷಾನ ಸೇನೆಗೆ ಬ್ರಿಟಿಷರಿಂದ ಸೋಲು.
28ನೆ ನವೆಂಬರ್ 6ನೆ ಡಿಸೆಂಬರ್ 1857, ಕಾನ್ಪುರ (M)	ನಮ್ಮ ಗ್ವಾಲಿಯರ್, ಸೇನಾದಳದ ವಶವಾಯಿತು.
3ನೇ ಜನವರಿ 1858, ಫತೇಗರ್ (H)	ನಮ್ಮವರಿಗೆ ಮರಣದಂಡನೆ. ಫತೇಗರ್ ಬ್ರಿಟಿಷರ ವಶವಾಯಿತು.
2–22ನೇ ಮಾರ್ಚ್ 1858, ಲಕ್ನೋ (J)	ಬ್ರಿಟಿಷರು ಮರಳಿ ವಶಪಡಿಸಿಕೊಂಡದ್ದು.
19ನೇ ಮಾರ್ಚ್ 3ನೇ ಏಪ್ರಿಲ್ 1858, ಝಾನ್ಸಿ (D)	ಬ್ರಿಟಿಷರಿಂದ ವಶ.
22ನೇ ಏಪ್ರಿಲ್ 1858, ಕಲ್ಪಿ (P)	ಬ್ರಿಟಿಷರಿಂದ ವಶ.
5–6ನೇ ಮೇ 1858, ಬರೇಲಿ (I)	ಬ್ರಿಟಿಷರ ವಶದಲ್ಲಿ.
16–21ನೇ ಜೂನ್ 1858, ಗ್ವಾಲಿಯರ್ (K)	ಬ್ರಿಟಿಷರ ವಶದಲ್ಲಿ. ನಮ್ಮವರಿಗೆ ಜಾರಾ–ಆಲಿಪುರದಲ್ಲಿ ಸೋಲು, ಝಾನ್ಸಿ ರಾಣಿಯು ಕೊಲ್ಲಲ್ಪಟ್ಟಳು.
31ನೇ ಆಗಸ್ಟ್ 1858, ಮುಲ್ತಾನ್ (B)	ವಿಸರ್ಜಿತ ಸೇನೆಯ ದಂಗೆ.
1ನೇ ನವೆಂಬರ್ 1858, ಮುಲ್ತಾನ್ (B)	ವಿಕ್ಟೋರಿಯಾ ರಾಣಿಯ ಘೋಷಣೆ.
7ನೇ ಏಪ್ರಿಲ್ 1859, ಪರೋನ್ ಜಂಗಲ್ಸ್ (R)	ತಾತ್ಯಾಟೋಪಿ ಮೋಸದಿಂದ ಸೆರೆಹಿಡಿಯಲ್ಪಟ್ಟ.
21ನೇ ಮೇ 1859, ಸಿರ್ಸಾ ಪಾಸ್ (L)	ಬ್ರಿಟಿಷರೊಡನೆ ಕೊನೆಯ ಯುದ್ಧ.

● ಯುದ್ಧ ನಡೆದ ಸ್ಥಳಗಳು

[ಈ ಭೂಪಟವನ್ನು ಭಾರತದ ಸರ್ವೇಕ್ಷಣಾ ಇಲಾಖೆಯ ಭೂಪಟವನ್ನಾಧರಿಸಿದ್ದು. ನಂ. 2489 HD 70–1000–500'72–1500'74.]

Sri Vidyabharathi Book Centre, Sringeri

CC-0. In Public Domain. Digitized by eGangotri

ಬಂಡಾಯವಾಗಿ ತರಂಭವಾದದ್ದು ದಂಗೆಯಾಗಿ ಪರಿವರ್ತನೆಗೊಂಡಿತು. ನಮ್ಮ ರೈತರು, ವ್ಯಾಪಾರಿಗಳು, ಶುಶಲಕರ್ಮಿಗಳು, ರಾಜರು, ನವಾಬರು ಎಲ್ಲರೂ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಭಾಗವಹಿಸಿದರು.

ಎಂಬತ್ತು ವರ್ಷ ವಯಸ್ಸಿನ ಬಹದ್ದೂರ್ ಷಾ ಝಫರನು ತನ್ನ ನಿವೃತ್ತಿಯಿಂದ ಹೊರಬಂದು ನಾಯಕತ್ವ ವಹಿಸಿಕೊಂಡ. ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ಭಾಗವಹಿಸಿದ ಇತರ ಪ್ರಮುಖ ವ್ಯಕ್ತಿಗಳೆಂದರೆ ನಾನಾ ಸಾಹೇಬ್, ಅವನ ಸೇನಾಧಿಕಾರಿ ತಾತ್ಯಾ ಟೋಪಿ, ಝಾನ್ಸಿಯ ರಾಣಿ ಲಕ್ಷ್ಮೀಬಾಯಿ, ಎಂಬತ್ತು ವರ್ಷ ವಯಸ್ಸಿನ ಕುನ್ವರ್ ಸಿಂಗ್, ಬೇಗಂ ಹಜರತ್ ಮಹಲ್, ರಾವ್ ತುಲಾರಾಮ್, ಫೈಜಾಬಾದಿನ ಮೌಲ್ವಿ, ಖಾನ್ ಬಹದ್ದೂರ್ ಖಾನ್ ಮತ್ತಿತರರು.

ಸುಮಾರು ಒಂದು ಶತಮಾನದವರೆಗೆ ತಡೆಹಿಡಿಯಲ್ಪಟ್ಟ ನಮ್ಮ ಜೋಪ ಪ್ರತೀಕಾರಕ್ಕಾಗಿ ಲಾವಾರಸದಂತೆ ಪುಟಿಯಿತು.

ಫರಂಗಿಯವರು! ಹೊಡಿ ಅವರನ್ನು.

ಭಾವೋದ್ರೇಕದ ಆ ಬಿಡುವಿನ ದಿನಗಳಲ್ಲೂ ನಮ್ಮ ಅನೇಕ ದೇಶಬಾಂಧವರು, ಅಸಹಾಯಕರಾದ ಬ್ರಿಟಿಷ್ ಮಹಿಳೆಯರಿಗೆ ಮತ್ತು ಮಕ್ಕಳಿಗೆ ರಕ್ಷಣೆ ಒದಗಿಸಿದರು.

ಯಾರೂ ನಿಮಗೆ ಹೆಡಕುಂಟುಮಾಡಲಾರರು. ನೀವು ಇಲ್ಲಿ ನಮ್ಮಲಿಯಂದ ಇರಿ.

ಥ್ಯಾಂಕ್ ಯೂ! ಥ್ಯಾಂಕ್ ಯೂ!

ಪ್ರಾರಂಭದಲ್ಲಿ ಬ್ರಿಟಿಷರು ಅಪಾರ ನಷ್ಟ ಅನುಭವಿಸಬೇಕಾಯಿತು. ಆದರೂ ಅವರು ಮತ್ತೆ ಒಂದಾಗಿ ಸೇನೆಯನ್ನು ಒಗ್ಗೂಡಿಸಿ ಕಳೆದುಹೋದ ಅಧಿಕಾರಗಳನ್ನು ಮತ್ತೆ ಗಳಿಸಿಕೊಳ್ಳುವುದರಲ್ಲಿ ಸಫಲರಾದರು. ಗದ್ದರವರು ಸೋತವರಿಗೆ ಕಿಂಚಿತ್ತೂ ಕರುಣೆ ತೋರಲಿಲ್ಲ. ಹಳ್ಳಿಗಳು ಬೆಂಕಿಗಾಹುತಿಯಾದವು. ನಮ್ಮ ದೇಶದ ಅಸಂಖ್ಯಾತ ಜನರು ಗಲ್ಲಿಗೇರಿಸಲ್ಪಟ್ಟರು.

Sri Jayachamarajendra Books Centre, Singeri

CC-0. In Public Domain. Digitized by eGangotri

1857ನೇ ದಂಗೆಯ ಪರಿಣಾಮವಾಗಿ 1858 ರಂದ ನಮ್ಮ ದೇಶ ಬ್ರಿಟಿಷ್ ಸಾಮ್ರಾಜ್ಯದ ನೇರ ಆಡಳಿತಕ್ಕೆ ಒಳಪಟ್ಟಿತು. ಮಹಾರಾಣಿ ವಿಕ್ಟೋರಿಯಾ ಘೋಷಣೆಯಿಂದನ್ನು ಹೊರಡಿಸಿದಳು:

"... ನಮ್ಮ ಇತರ ಎಲ್ಲಾ ಪ್ರಜೆಗಳ ಬಗ್ಗೆ ನಮ್ಮ ಕರ್ತವ್ಯ ಏನಿದೆಯೋ, ಅದೇ ಕರ್ತವ್ಯ ವನ್ನು ನಮ್ಮ ಭಾರತದ ನಿವಾಸಿಗಳ ಪರ-ಪಾಡಿಯೂ ಪಾಲಿಸಲು ನಾವು ವಚನಬದ್ಧರಾಗಿದ್ದೇವೆ."

"... ಯಾವ ಪ್ರಜೆಯೂ ಯಾವುದೇ ರೀತಿಯಲ್ಲೂ ಪಕ್ಷಪಾತಕ್ಕೊಳಗಾಗಬಾರದು. ಅವರ ಶಾಂತಿ ಭಂಗ ಬರಬಾರದು. ಅವರು ಯಾವ ವಿಧದಲ್ಲೂ ಪೀಡೆಗೊಳಗಾಗಬಾರದು, ಅವರ ಧಾರ್ಮಿಕ ನಂಬಿಕೆಗಳಿಗೆ ಅಡ್ಡಿ-ಯುಂಟು ಮಾಡಬಾರದು ಎಂಬುದು ಅರಸೊ-ತ್ತಿಗೆಯ ಇಚ್ಛೆ ಎಂದು ನಾವು ಪ್ರಕಟಿಸುತ್ತೇವೆ. ಎಲ್ಲರೂ ಸರಿಸಮಾನವಾದ ನಿಷ್ಪಕ್ಷಪಾತಪೂರ್ಣ ಕಾನೂನಿನ ರಕ್ಷಣೆ ಪಡೆಯುವರು."

"... ನಮ್ಮ ಪ್ರಜೆಗಳು ಯಾವುದೇ ಜನಾಂಗ ಜಾತಿಯ ಭೇದಭಾವವಿಲ್ಲದೆ, ಯಾವುದೇ ಅಡಚಣೆ ಅಥವಾ ಪಕ್ಷಪಾತವಿಲ್ಲದೆ ಸರಕಾರಿ ಹುದ್ದೆಗಳಲ್ಲಿ ನೌಕರಿ ಮಾಡಬೇಕೆನ್ನುವುದು ನಮ್ಮ ಅಭಿಲಾಷೆ. ತಮ್ಮ ಸ್ಥಾನಗಳು ವಿದ್ಯಾಭ್ಯಾಸದ ಅರ್ಹತೆ, ಪ್ರಾಮಾಣಿಕತೆ ಮತ್ತು ದಕ್ಷತೆಗಳ ಆಧಾರದ ಮೇಲೆ ದೊರಕುತ್ತವೆ..."

ನಮ್ಮ ಯುವಜನಾಂಗ, ಅದರಲ್ಲೂ ಇಂಗ್ಲೀಷ್ ವ್ಯಾಸಂಗದಿಂದ ಪಾಶ್ಚಿಮಾತ್ಯ ವಿಚಾರಧಾರೆಗಳಿಂದ ಸ್ವಾತಂತ್ರ್ಯ, ಸಮಾನತೆ ಮತ್ತು ಭಾತೃತ್ವಗಳ ಬಗ್ಗೆ ತಿಳಿದುಕೊಂಡಿದ್ದ ಹೊಸ ತಲೆಮಾರಿನವರು ಮಹಾರಾಣಿಯ ಈ ಪ್ರಕಟಣೆಯಿಂದಾಗಿ ಆಶಾಭಾವ ತಳೆದರು. ಆದರೆ ಸ್ವಲ್ಪ ಕಾಲದಲ್ಲೇ ಅವರಿಗೆ ಭ್ರಮನಿರಸನವಾಯಿತು.

ಹೌದು. ಎಲ್ಲರೂ ಸರಿಸಮಾನರೇ. ಆದರೆ ಇಂಗ್ಲೀಷರು ಸ್ವಲ್ಪ ಹೆಚ್ಚು ಸರಿಸಮಾನರು.

ಅವರ ಕಣ್ಣುಗಳಲ್ಲಿ ಒಬ್ಬ ಸಾಮಾನ್ಯ ಬಿಳಿಯುಗಲನ ಪಾಶ್ಚ, ಪ್ರಾಮಾಣಿಕ ಭಾರತೀಯನು ಒಬ್ಬನಿಗಿಂತಲೂ ಶ್ರೇಷ್ಠ. ಈಗಲೂ ಸೂಡ ನಮ್ಮ ನ್ಯಾಯಾಧೀಶರಿಗೆ ಒಬ್ಬ ಬಿಳಿಯುಗಲನ ಅಪರಾಧಿಯ ವಿಚಾರಣೆ ನಡೆಸಲು ಅನುಮತಿ ಇಲ್ಲ.

Sri Vidyaranya Pustaka Book Centre, Sringeri

CC-O. In Public Domain. Digitized by eGangotri

ಬಂಗಾಳದಲ್ಲಿ ನೀಲಿ ಬಿಳಿಗಾರರು ಮಾಡುತ್ತಿದ್ದ ಅನ್ಯಾಯದ ವಿರುದ್ಧ ಅಹಿಂಸಾ ಹೋರಾಟವನ್ನು ಪ್ರಾರಂಭಿಸಿದರು. ಆ ಹೊತ್ತಿಗೆ ನಮ್ಮ ಪತ್ರಿಕೆಗಳು ನೀಲಿ ತೋಟಗಳ ಮಾಲೀಕರ ಕ್ರೂರ ಕೃತ್ಯಗಳನ್ನು ಬಹಿರಂಗ ಪಡಿಸಿದವು. ಹಿಂದೂ ಪೇಟ್ರಿಯಟ್ ಪತ್ರಿಕೆ ಹೀಗೆ ಬರೆಯಿತು:

ರೈತರನ್ನು.... ಹೊಡೆಯುತ್ತಾರೆ, ಅಪಮಾನಗೊಳಿಸುತ್ತಾರೆ, ಕೆಟ್ಟ ಹಾಸುತ್ತಾರೆ, ಉಪವಾಸ ಬೀಳಿಸುತ್ತಾರೆ, ಜೈಲಿಗಟ್ಟುತ್ತಾರೆ.... ಹೆಣ್ಣುಗಳನ್ನು ಸುಟ್ಟುಹಾಕಿದ್ದಾರೆ, ಗಂಡಸರನ್ನು ಬಡಿದಟ್ಟಿದ್ದಾರೆ, ಪ್ರೀಯರ ಮಾನಭಂಗ ಮಾಡಿದ್ದಾರೆ, ಗುಡಾಣಗಳನ್ನು ದೋಚಿದ್ದಾರೆ.... ಆದರೂ ರೈತರು ಮಣಿದಿಲ್ಲ. ತಮ್ಮ ಜನ್ಮಸಿದ್ಧ ಹಕ್ಕು ಎನಿಸಿದ ಸ್ವಾತಂತ್ರ್ಯಕ್ಕಾಗಿ ಹಂಬಲಿಸುವುದನ್ನು ಬಿಟ್ಟಿಲ್ಲ.

ಇಂಗ್ಲೀಷ್ ಶಿಕ್ಷಣ ಪಡೆದ ನಮ್ಮ ದೇಶವಾಸಿಗಳು ಪತ್ರಿಕೆಗಳನ್ನು ಹೊರತಂದು ಸಂಘ-ಸಂಸ್ಥೆಗಳನ್ನು ಸ್ಥಾಪಿಸಿದರೆ, ದಕ್ಷಿಣದಲ್ಲಿನ ನಮ್ಮ ಬಡ ಗ್ರಾಮವಾಸಿಗಳು ದಳ್ಳಾಳಿಗಳ ವಿರುದ್ಧ ಯುದ್ಧ ಹೂಡಿದರು. ಪ್ರತಿಜ್ಞಾ ಪತ್ರಗಳು ಬೂದಿಯಾದವು. ಧಾನ್ಯ ಮಳಿಗೆ ಲೂಟಿಯಾದವು.

ನಮ್ಮ ಕೃಷಿಕರು ದಳ್ಳಾಳಿಗಳ ಮೇಲೆ ಆಕ್ರಮಣ ನಡೆಸಿದಾಗ, ವಾಸುದೇವ ಬಲವಂತ ಫಡ್ಕೆ ಎಂಬ ಒಬ್ಬ ತರುಣ ದೇಶಭಕ್ತ, ನಮ್ಮ ದಾರಿದ್ರ್ಯಕ್ಕೆ ಬ್ರಿಟಿಷರೇ ಕಾರಣ ಎಂದು ಸಾರಿದ

ಫರಂಗಿಗಳು! ನಮ್ಮ ಬಡತನ, ಸಂಕಷ್ಟಗಳಿಗೆ ಅವರೇ ಹೊಣೆ.

ಅವನು ಸಶಸ್ತ್ರ ಹೋರಾಟಕ್ಕಿಳಿದ.

© Kriyabharathi Book Centre, Sringeri

CC-O. In Public Domain. Digitized by eGangotri

ವಾಸುದೇವ ಫಡ್ಕೆಯ ಕ್ರಾಂತಿಕಾರಕ ಚಟುವಟಿಕೆಗಳಿಂದ, ಅವನನ್ನು ಬಂಧಿಸಿ ಪುಣೆಗೆ ಕರೆತಂದಾಗ ಅವನಿಗೆ ದೊರೆತ ಹೃದ್ಭವ್ಯವಾದ ಸ್ವಾಗತದಿಂದ ಬ್ರಿಟಿಷ್ ಅಧಿಕಾರಿಗಳು ಭಯಭೀತರಾದರು.

ಭಾರತೀಯರಿಗೆ ಅವನೊಬ್ಬ ನಾಯಕ!

ನಮಗೆ ಒಳ್ಳೆಯದನ್ನೇ ಬಯಸಿದ ಬ್ರಿಟಿಷ್ ಅಧಿಕಾರಿಗಳೂ ಚಿಂತಾಕ್ರಾಂತರಾದರು.

ಸುಶಿಕ್ಷಿತ ಭಾರತೀಯ ತರುಣರೂ ಈ ಬಂಡಾಯದವರೊಡನೆ ಸೇರಿಕೊಂಡರೆ ಏನು ಮಾಡುವುದು?

ಅವರಿಗೆ ರಕ್ಷಣೆಯನ್ನು ಒದಗಿಸದಿದ್ದಲ್ಲಿ ಅವರೂ ಖಂಡಿತ ಬಂಡಾಯವೇಳುತ್ತಾರೆ.

ಸಧ್ಯದಲ್ಲೇ ನಿವೃತ್ತನಾಗಲಿದ್ದ ಒಬ್ಬ ಹಿರಿಯ ಸರಕಾರಿ ಅಧಿಕಾರಿ ಆಲನ್ ಆಕ್ಟೇವಿಯನ್ ಹ್ಯೂಮ್ ಒಂದು ಪರಿಹಾರ ಸೂಚಿಸಿದ.

ಇಂಗ್ಲೆಂಡಿನಲ್ಲಿ ಆಡಳಿತದ ವಿರೋಧ-ಪಕ್ಷ ನಡೆಸುವಂತೆ ಅಂದರೆ ಸರಕಾರದ ತಪ್ಪುಗಳನ್ನು ಎತ್ತಿ ತೋರಿಸಿ, ಸರಿಯಾದ ಕ್ರಮಗಳನ್ನು ಸೂಚಿಸಬಲ್ಲ ಒಂದು ಸಂಘ ಇಲ್ಲಿಯೂ ಬೇಕಾಗಿದೆ.

ನಮ್ಮ ದೇಶಬಾಂಧವರಿಗೆ ಹ್ಯೂಮ್ ಒಂದು ಬಹಿರಂಗ ಪತ್ರ ಬರೆದ.

...ನಿಮಗೆ ಹಾಗೂ ನಿಮ್ಮ ರಾಷ್ಟ್ರಕ್ಕೆ ಹೆಚ್ಚಿನ ಸ್ವಾತಂತ್ರ್ಯ ಪಡೆದೇ ತೀರುತ್ತೇವೆಂದು ದೃಢ ನಿರ್ಧಾರ ಮಾಡಿ ಹೋರಾಟ ನಡೆಸಿ. ಪಕ್ಷಪಾತವಿಲ್ಲದ ಆಳ್ವಿಕೆ, ನಿಮ್ಮ ಸ್ವಂತದ ಕಾರುಬಾರುಗಳನ್ನು ನಿರ್ವಹಿಸುವಲ್ಲಿ....

...ಎಷ್ಟೇ ಸದುದ್ದೇಶ ಹೊಂದಿದ್ದರೂ ಪ್ರತ್ಯೇಕ ಪ್ರತ್ಯೇಕವಾಗಿ ಹೋರಾಡುವ ವ್ಯಕ್ತಿಗಳು ಶಕ್ತಿಹೀನರು, ಏಕಾಂಗಿಯಾಗಿ.....

ಸಮಗ್ರ ಭಾರತಕ್ಕೆ ಒಂದೇ ಸಂಘ ಸ್ಥಾಪಿಸಬೇಕೆನ್ನುವ ವಾದ ಆತನದು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-0. In Public Domain. Digitized by eGangotri

ಭಾರತೀಯ ಕಾಂಗ್ರೆಸ್ಸಿನ ಉದ್ಘಾಟನಾಧಿವೇಶನದಲ್ಲಿ ಚರ್ಚೆಯನಂತರ ಒಂಭತ್ತು ನಿರ್ಣಯಗಳು ಅಂಗೀಕೃತವಾದವು.

ವ್ಯವಸ್ಥಾಪಕ ಸಭೆಗಳಲ್ಲಿನ ನಮ್ಮ ಚುನಾಯಿತ ಸದಸ್ಯರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಅಧಿಕಗೊಳ್ಳಬೇಕೆನ್ನುವುದು ನಮ್ಮ ಆಶಯ... ವ್ಯವಸ್ಥಾಪಕ ಸಭೆಗಳಲ್ಲಿನ ಬಹುಮತ ಸದಸ್ಯರು ನಿಯಮಾನುಸಾರ ಪ್ರತಿಭಟನೆ ವ್ಯಕ್ತಪಡಿಸಿದರೆ, ಅದರ ವಿಚಾರಣೆ ಮಾಡಲು ಶಾಸನ ಸಭೆಗಳಲ್ಲೂ ನಮ್ಮದೊಂದು ಸ್ಥಾಯೀ ಸಮಿತಿ ಇರಬೇಕು.

ನಮ್ಮ ನಾಯಕರು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸಿ, ಸಂಯಮದಿಂದಲೇ ಮಾತನಾಡಿದರೂ ಇಂಗ್ಲೆಂಡಿನ ಪ್ರಮುಖ ಪತ್ರಿಕೆಯಾದ "ದಿ ಟೈಂಸ್" ತೀವ್ರ ಟೀಕೆಗಳನ್ನು ಮಾಡಿತು.

ಶಕ್ತಿ ಸಾಮರ್ಥ್ಯಗಳಿಂದ ಭಾರತವನ್ನು ಗೆಲ್ಲಲಾಯಿತು. ಶಕ್ತಿ ಸಾಮರ್ಥ್ಯಗಳಿಂದಲೇ ಭಾರತವನ್ನು ಆಳಬೇಕು... ನಾವು ಹಿಮ್ಮೆಟ್ಟಬೇಕಾದರೆ, ಅದು ಹರಿತವಾದ ನಾಲಿಗೆಯಿಂದಾಗಲೀ ಅಥವಾ ತೀಕ್ಷ್ಣವಾದ ಲೇಖನಿಯ ಪ್ರಭಾವದಿಂದಾಗಲೀ ಅಲ್ಲ. ಪ್ರಬಲವಾದ ಮತ್ತು ಹರಿತವಾದ ಖಡ್ಗದಿಂದ ಮಾತ್ರ ಅದು ಸಾಧ್ಯ.....

The Tim

ಕಾಂಗ್ರೆಸ್ಸಿನ ಉದಯ ಇಂಗ್ಲೀಷರಿಗೆ ಒಂದು ಚರ್ಚೆಯ ವಿಷಯವಾಗಿತ್ತು.

ಇಲ್ಲಿಯವರೆಗೂ ನಮ್ಮ ಯಾವುದೇ ಯುದ್ಧಗಳಲ್ಲಿ ಭಾರತದ ಜನತೆ ನಮ್ಮ ವಿರುದ್ಧ ಇರಲಿಲ್ಲ. ನಮ್ಮ ಯುದ್ಧಗಳು ರಾಜರ ಮತ್ತು ನವಾಬರ ವಿರುದ್ಧ ಇದ್ದವು ಮತ್ತು ಅವರ ಸೋಲಿನೊಡನೆ ಈ ದೇಶದ ಜನತೆ ನಮ್ಮ ಆಡಳಿತವನ್ನು ಸಹಜವಾಗಿಯೇ ಒಪ್ಪಿಕೊಂಡಿದೆ.

ಭಾರತದ ಜನತೆ ನಮ್ಮ ಆಡಳಿತಕ್ಕೆ ವಿರೋಧ ಸೂಚಿಸಿದ ದಿನದಿಂದಲೇ ನಮ್ಮ ಕಷ್ಟಗಳು ಪ್ರಾರಂಭವಾಗುತ್ತವೆ.

ಜನರು ನಮ್ಮ ಆಡಳಿತಕ್ಕೆ ವಿರೋಧ ಸೂಚಿಸಬೇಕು ಎಂಬುದೇ ಕಾಂಗ್ರೆಸ್‌ನ ಪ್ರಯತ್ನ ಕೂಡಾ.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ವಾಸ್ತವವಾಗಿ ಮೊದಮೊದಲು ಇಂಗ್ಲೀಷರ ಹಾಗೂ ಅವರ ಸರಕಾರಕ್ಕೆ ವಿನಮ್ರ ಪ್ರಾರ್ಥನೆ ಸಲ್ಲಿಸುವ ನಿಷ್ಠ ವಿದ್ಯಾವಂತ ಪ್ರಜೆಗಳ ಒಂದು ಸಂಘ ಮಾತ್ರವಾಗಿತ್ತು. ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಲು ಮಹಾರಾಷ್ಟ್ರದ ರೈತರಿಗೆ ಕರೆಕೊಟ್ಟವರು ಬಾಲಗಂಗಾಧರ ತಿಲಕರು. 1896 ರಲ್ಲಿ ದೇಶ ಕ್ಷಾಮಡಾಮರಗಳಿಗೆ ತುತ್ತಾದಾಗ-

ಫಸಲು ಕೈಕೊಟ್ಟಿತು.. ನಿಮ್ಮ ಬಳಿ ಆಹಾರಧಾನ್ಯಗಳೂ ಇಲ್ಲ, ಹಣವೂ ಇಲ್ಲ. ಈಗೇನು ನೀವು ನಿಮ್ಮ ತಲೆಯ ಮೇಲಿನ ಸೂರನ್ನು ಕಳೆದುಕೊಳ್ಳುವಿರಾ? ನಿಮಗೂ ಬದುಕುವ ಅಧಿಕಾರವಿದೆ. ಸಾವಿನ ದವಡೆಯಲ್ಲಿರುವಾಗಲೂ, ನೀವು ನಿಮ್ಮ ಹಕ್ಕುಗಳಿಗಾಗಿ ಹೋರಾಡಲು ಆಗುವುದಿಲ್ಲವೇ?

Sri Vidyabharathi Boo... ...eri »

CC-O. In Public Domain. Digitized by eGangotri

ತಿಲಕರ ನಾಯಕತ್ವದಲ್ಲಿ ನಮ್ಮ ಜನರು ಭೂಕಂದಾಯವನ್ನು ತೆರಲು ನಿರಾಕರಿಸಿದರು. ಸರಕಾರ ತಮಗೆ ಕೆಲಸ ಮತ್ತು ಆಹಾರ ಒದಗಿಸಬೇಕೆಂದು ಒತ್ತಾಯಪಡಿಸಿದರು. ತಿಲಕರು ಶಿವಾಜಿ ಜಯಂತಿ ಆಚರಣೋತ್ಸವವನ್ನು ಪ್ರಾರಂಭಿಸಿದರು. ರಾಷ್ಟ್ರೀಯ ಜಾಗೃತಿ ನಿರ್ಮಾಣಕ್ಕೆ ಹಾಗೂ ನಮ್ಮ ಹಕ್ಕುಗಳಿಗಾಗಿ ಸಂಘಟಿತ ಹೋರಾಟಕ್ಕೆ ಪ್ರೇರಕವಾಗುವಂತೆ ಗಣಪತಿ ಉತ್ಸವವನ್ನು ಆರಂಭಿಸಿದರು.

ಶಿವಾಜಿ ತನ್ನ ತಾಯ್ನಾಡನ್ನು ಪ್ರೀತಿಸಿದ. ಸ್ವಾತಂತ್ರ್ಯವನ್ನು ಅಮೂಲ್ಯವೆಂದು ಪರಿಗಣಿಸಿದ.

ರಾಜದ್ರೋಹದ ಆಪಾದನೆಯ ಮೇಲೆ ಬಂಧಿಸಲ್ಪಟ್ಟಾಗಲೂ ತಿಲಕರು ಶೋಸಿಂ* ಯಲ್ಲಿನ ತಮ್ಮ ಲೇಖನಗಳ ಬಗ್ಗೆ ಕ್ಷಮೆ ಯಾಚಿಸಲು ನಿರಾಕರಿಸಿ ಕಾರಾಗೃಹಕ್ಕೆ ಹೋಗಲು ಒಪ್ಪಿದರು.

ಜನರ ಮಧ್ಯೆಯಿರುವ ಸಾಧನ ಸಂಪೂರ್ಣವಾಗಿ ನನ್ನ ವ್ಯಕ್ತಿತ್ವವನ್ನೇ ಅವಲಂಬಿಸಿದೆ. ಸಂಕಷ್ಟಗಳಿಗೆ ನಾನು ಹೆದರಿ, ಹೋರಾಟವನ್ನು ಕೈಬಿಟ್ಟರೆ, ಮಹಾರಾಷ್ಟ್ರದಲ್ಲಿ ಬಾಳುವುದೂ, ಅಂಡಮಾನಿನಲ್ಲಿ ಬದುಕುವುದೂ ಒಂದೇ ಎಂದು ಭಾವಿಸುತ್ತೇನೆ.

ಬಂಗಾಳದಲ್ಲಿ ಸುರೇಂದ್ರನಾಥ ಬ್ಯಾನರ್ಜಿ, ಬಿಪಿನ್ ಚಂದ್ರಪಾಲ್, ಅರವಿಂದ ಘೋಷ್ ಮತ್ತಿತರರು ರಾಷ್ಟ್ರೀಯತೆಯ ಪಂಜನ್ನು ಎತ್ತಿ ಹಿಡಿದರು. ಪಂಜಾಬಿನಲ್ಲಿ ಲಾಲಾ ಲಜಪತರಾಯ್ ಬ್ರಿಟಿಷರ ವಿರುದ್ಧ ಕಿಡಿಕಾರಿದರು. 20ನೇ ಶತಮಾನದ ಆರಂಭದೊಂದಿಗೆ ದೇಶದಲ್ಲಿ ಒಂದು ಹೊಸ ಶಕ್ತಿ ಉದಯವಾಯಿತು.

"ಸರಕಾರದಿಂದ ಹಾಗೂ ಶಾಸನ ಸಭೆಗಳಿಂದ ನಮ್ಮ ದೃಷ್ಟಿಯನ್ನು ಹೊರ್ಟಿಗಿಲ್ಲದೆ ಬಡವಾದ, ಬಕ್ಕಾಲಿಯ, ಕಷ್ಟಸಹಿಷ್ಣುಗಳಾದ 200 ದಶಲಕ್ಷ ಭಾರತೀಯ ಜನತೆಯನ್ನು ಹಂಚಿಸಿದ್ದೇವೆ. ಅಲ್ಲಿ ನಾವು ಒಂದು ಹೊಸ ಸಾಮರ್ಥ್ಯವನ್ನು ಕಾಣುತ್ತಿದ್ದೇವೆ.... ಅರಸನಗ್ನರಾದ ಭಾರತದ ಜನರಲ್ಲಿ ನಮಗೆ ನಂಬಿಕೆ ಮೂಡಿ ಬರುತ್ತಿವೆ..... ಪರಕೀಯ ಸರಕಾರದಲ್ಲಿನ ಹಾಗೂ ವಿದೇಶಗಳಲ್ಲಿನ ನಮ್ಮ ನಂಬಿಕೆ ಕ್ಷೀಣಗೊಳ್ಳುತ್ತಿದ್ದಂತೆ ಭಾರತೀಯ ಮಾನವ ಜಾತಿಯಲ್ಲಿ ನಮ್ಮ ದೃಢೀ ನಂಬಿಕೆ ತೀವ್ರವೂ, ಗಾಢವೂ, ಆಳವೂ ಮತ್ತು ಹೆಚ್ಚು ಚೈತನ್ಯದಾಯಿಯೂ ಆಗಿ ಬೆಳೆದಿದೆ.... ಈ ನವ ಚೈತನ್ಯ ಮುಂದಿನ ವರುಷಗಳಲ್ಲಿನ ನಮ್ಮ ಸ್ವಾತಂತ್ರ್ಯ ಹೋರಾಟಕ್ಕೆ ಸೂಚಿತ ನೀಡಿತು."

ಈ ಹೊಸ ತೇಜೋಪೂರ್ಣ ಪ್ರಭಾವ ಮುಂದಿನ ವರುಷಗಳಲ್ಲಿನ ನಮ್ಮ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಉತ್ಸೇಜನವನ್ನು ಇತ್ತಿತು.

* ತಿಲಕರಿಂದ ಸ್ಥಾಪಿತವಾದ ಪತ್ರಿಕೆ
• ಬ್ರಿಟಿಷ್ ಆಳ್ವಿಕೆಯಲ್ಲಿ ಕಠಿಣ ಸೆರೆವಾಸ ಅನುಭವಿಸಬೇಕಾದವರನ್ನು ಕಳಿಸಲಾಗುತ್ತಿದ್ದ ನೆಲೆ.

Sri Vidyabharathi Book Centre, Sirigeri

CC-O. In Public Domain. Digitized by eGangotri

ATLAS FUN POP

THE SUPER-DUPER LOLLYPOP



Sri Vidyabharathi Book Centre, Sringeri

Mafd. by: **ATLAS CONFECTIONERS PVT. LTD.** Pune-411 005.

CC-O. In Public Domain. Digitized by eGangotri

Amar Chitra Katha Presents the Epic of New India: The March to Freedom in 6 Volumes

The Birth of the Indian National Congress

* A Nation Awakes
* The Saga of Indian Revolutionaries
* The Call for Swaraj
* The Salt Satyagraha
* The Tryst with Destiny

AMAR CHITRA KATHA

ALSO READ

188 Babasaheb Ambedkar
156 Bagha Jatin
293 Beni Madho
234 Bhagat Singh
142 Chandra Shekhar Azad
344 Chittaranjan Das
120 Dayananda
325 Jagdish Chandra Bose
* Jallianwalla Bagh
206 Jayaprakash Narayan
304 Dr. Kotnis
* Khudiram Bose
311 Kunwar Singh
271 Lalbahadur Shastri
219 Lokamanya Tilak
334 Mangal Pande
227 Sadhu Vaswani
136 Rabindranath Tagore
216 Rani Abbakka
260 Ramakrishna, Sri
51 Rani of Jhansi
262 Rash Behari Bose
166 Rani of Kittur
* Sea Route to India
303 Senapati Bapat
77 Subhas Chandra Bose
275 Subramania Bharati
286 Thanedar Hasan Askari
187 Tipu Sultan
309 Veer Savarkar
108 Vidyasagar
146 Vivekananda
213 Velu Thampi
306 Yellapragada Subbarow

Rs. 4/- each

IBH Distributed by: INDIA BOOK HOUSE

* Under Preparation

Sri Vidyabharathi Book Centre, Sringeri

CC-O. In Public Domain. Digitized by eGangotri

Architect 2011 A.D. !

Your child has some inborn talents. But will his genius flower into full bloom as he grows up? Will you be giving him the all-important education, the all-needed start-in-life to help him achieve his cherished goals?

Plan for his future today. By planning your savings with LIC. There are policies suited to specific requirements, be it for your child's higher education, marriage or entry in profession.

Contact your LIC agent right now. He'll be happy to help plan a secure future.

For you and your child.

NPS-LIC-E-2/85

योगक्षेमं वहाम्यहम्

Life Insurance Corporation of India

There is no substitute for Life Insurance.

Sri Vidyabharathi Book Centre, Sringeri

CC-O. In Public Domain. Digitized by eGangotri



ರಂಗನು ಕಾಯಿಲೆಯಿಂದಲೆ ಬಳಲಿರೆ
ಮಿತ್ರರು ಯಾರೂ ಈಚಕೆ ಬರದಿರೆ
ಬಬ್ಬನೆ ಮನೆಯಲಿ ಮಾಡುವುದೇನು?
ಸಮಯವು ಕಳೆಯಲು ಅಡುವುದೇನು?

ರಂಗನ ರಮಿಸಲು 'ಎಕೋ' ಬಂದಿತು
ದ್ವಾದಶ ವರ್ಣದ ಮಿತ್ರರ ತಂದಿತು
ಕಾಗದ ಬಂದಿರೆ ಚಿತ್ರವ ಬರೆದನು
ಹಕ್ಕಿಯ, ಮಂಗವ, ಆನೆಯ ಕೊರೆದನು

'ಎಕೋ' ಹಸಿರಿದೆ, 'ಎಕೋ' ನೀಲಿ
ಕೆಂಪು, ಕಿತ್ತಳೆ ಮತ್ತಿದೆ ಹಳದಿ
ಪರ್ಪಲ್ ಬ್ರಾಕ್ ವಯೋಲೆಟ್ ಬಣ್ಣ
ಗುಲಾಬಿ, ಕಂದು ಬಂದವು ಅಣ್ಣ

Trikaya-E-J 85 KAN

ಎಕೋ
ಸ್ಕೆಚ್ ಪೆನ್ಸ್ ಬಣ್ಣಗಳೊಂದಿಗೆ ಚಿಕ್ಕಂದ! ಚಿತ್ರವ ಬರೆದಿರೆ ಆನಂದ!

ಪ್ರಿಸಮ್ ರೈಟಿಂಗ್ ಪ್ಯಾಂಟ್ಸ್ ಪ್ರೈ. ಲಿ. 18, ಸುಧಾತ್ ರೋಡ್, ವಿಲೆ ಪಾರ್ಲೆ (ವೆಸ್ಟ್), ಬೊಂಬಾಯಿ-400 057 ಫೋನ್ : 6040305, 6043556.

Sri Vijayabharathi Book Centre, Shirgeri